## <u>ಅಭ್ಯಾಸ 31</u>

## <u>ದೇವದರ್ಶನ ಗುಡಾರದ ಅಧ್ಯಯನ</u>

ಇಂದು ನಾವು ದೇವರು ಮೋಶೆಗೆ ವಿಶೇಶವಾಗಿ ಕಟ್ಟಲು ಹೇಳಿದ ಗುಡಾರದ ಬಗ್ಗೆ ಅಧ್ಯಯನ ಮಾಡಲಿದ್ದೇವೆ.

ಹೌದು! ಇದಾಗಿದೆ ಅರಣ್ಯದಲ್ಲಿ ಕಟ್ಟಲ್ಪಟ್ಟ ದೇವದರ್ಶನ ಗುಡಾರ!

ಇದನ್ನು ಕಟ್ಟುವ ಬಗ್ಗೆ ದೇವರು ಹೇಳುವ ವಚನಗಳನ್ನು ಓದೋಣ –

**ವಿಮೋಚನಾಕಾಂಡ 25:8–9**

"ನಾನು ಅವರ ಮಧ್ಯದಲ್ಲಿ ವಾಸಿಸುವದಕ್ಕೆ ನನಗೆ ಒಂದು ದೇವಸ್ಥಾನವನ್ನು ಕಟ್ಟಿಸಬೇಕು. ನಾನು ನಿನಗೆ ತೋರಿಸುವ ಮಾದರಿಯ ಪ್ರಕಾರವೇ ಗುಡಾರವನ್ನೂ ಅದರಲ್ಲಿರುವ ಎಲ್ಲಾ ಸಾಮಾನುಗಳನ್ನೂ ಮಾಡಿಸಬೇಕು."

ಹೌದು! ದೇವರು ಹೀಗೆ ದೇವದರ್ಶನ ಗುಡಾರವನ್ನು ಕಟ್ಟುವ "ಮಾದರಿ" ಹಾಗೂ ಇದರ ಅಲೇ ಸೂಕ್ಷ್ಮವಾದ ಅಂಶಗಳನ್ನು ಪಾಲಿಸುವ ವಿವರಣೆಗಳನ್ನೂ ನೀಡಿದರು ಮತ್ತು ದೇವರು ಈ "ಮಾದರಿ"ಯನ್ನು ಅಚ್ಚುಕಟ್ಟಾಗಿ ಪಾಲಿಸುವ ಒಂದೊಂದು ವಿಷಯಗಳಲ್ಲಿ ತುಂಬಾ ನಿರ್ದಿಷ್ಟವಾಗಿದ್ದರು.

ಅವರು ಹೇಳಿದ ವಚನವನ್ನು ಮತ್ತೊಂದಾವರ್ತಿ ಸ್ಪಷ್ಟವಾಗಿ ಗಮನಿಸೋಣ –

**ವಿಮೋಚನಾಕಾಂಡ 25:40**

"ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನು ಮಾಡಿಸಬೇಕು, ನೋಡು."

ಈ ದೇವದರ್ಶನ ಗುಡಾರವನ್ನು ಕಟ್ಟಲು ಬೇಕಾಗಿರುವ ತುಂಬಾ ಜಡಿಲವಾದ ಕೆಲಸವನ್ನು ಒಳಗೊಂಡಿರುವ ಸಾಮಾನುಗಳಾದ ಹೊದಿಕೆಗಳು, ಪರದೆಗಳು(ತೆರೆಗಳು), ಗೋಡೆಗಳು, ಯಜ್ಞವೇದಿಗಳು ಮತ್ತು ಲೋಹದ ಕಸುಲುಗಾರಿಕೆ ಮುಂತಾದವುಗಳ ವಿವರಣೆಗಳನ್ನು ಅಧ್ಯಾಯ 25 ರಿಂದ 40ರವರೆಗೆ ಕೊಡಲಾಗಿದೆ.

ಹೀಗೆ ಮೋಶೆಯು ಇಸ್ರಾಯೇಲ್ಯರ ಕುಟುಂಬಗಳಿಗೆ ಕೊಟ್ಟ ಆದೇಶದ ಪ್ರಕಾರ ಅಂತಿಮವಾಗಿ ಈ ಕೆಳಗೆ ಓದುವಂತೆ ದೇವದರ್ಶನ ಗುಡಾರವು ಸಂಪೂರ್ಣವಾಗಿ ಕಟ್ಟಲ್ಪಟ್ಟಿತು.

**ವಿಮೋಚನಾಕಾಂಡ 39:43**

"ಯೆಹೋವನು ಮೋಶೆಗೆ ಆಜ್ಞಾಪಿಸಿದಂತೆಯೇ ಇಸ್ರಾಯೇಲ್ಯರು ಆ ಕೆಲಸವನ್ನೆಲ್ಲಾ ಮಾಡಿದ್ದರು. ಅವರು ಮಾಡಿದ್ದ ಕೆಲಸವನ್ನು ಮೋಶೆ ಪರೀಕ್ಷಿಸಲಾಗಿ ಯೆಹೋವ ಅಪ್ಪಣೆಯಂತೆಯೇ ಅವರು ಎಲ್ಲವನ್ನು ಮಾಡಿ ಮುಗಿಸಿದರೆಂದು......."

ಈಗ ಈ ದೇವದರ್ಶನ ಗುಡಾರವನ್ನು ಇಸ್ರಾಯೇಲ್ಯರ ಮಧ್ಯದಲ್ಲಿ ಸ್ಥಾಪಿಸಬೇಕು.

**ಅರಣ್ಯಕಾಂಡ 2:2**

".......ಇಸ್ರಾಯೇಲ್ಯರೆಲ್ಲರೂ ದೇವದರ್ಶನದ ಗುಡಾರದ ಸುತ್ತಲು ಸ್ವಲ್ಪ ದೂರವಾಗಿ ತಮ್ಮ ಡೇರೆಗಳನ್ನು ಹಾಕಿಕೊಳ್ಳಬೇಕು...."

ಹೌದು! ಇಸ್ರಾಯೇಲ್ಯರು ತಮ್ಮ ಹನ್ನೆರಡು ಗೋತ್ರಗಳ ಪ್ರಕಾರ ನಾಲ್ಕು ದಿಕ್ಕುಗಳಾದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಲ್ಲಿ ತಮ್ಮ ಡೇರೆಗಳನ್ನು ಹಾಕಿಕೊಳ್ಳಬೇಕಾಗಿತ್ತು.

ಈ ದೇವದರ್ಶನ ಗುಡಾರ ಅವರ ಮಧ್ಯದಲ್ಲಿ ಇರಬೇಕಾಗಿತ್ತು!

ಈ ದೇವದರ್ಶನ ಗುಡಾರದ ಅರ್ಥವೇನು? ಇದು ಏನನ್ನು ಸೂಚಿಸುತ್ತದೆ?

ಇದಕ್ಕೆ ಉತ್ತರವನ್ನು ಹೀಗೆ ಓದುತ್ತೇವೆ –

**ಹಿಬ್ರಿಯ 8:5**

"ಅವರು ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪವೂ ಛಾಯೆಯೂ ಆಗಿರುವ ಆಲಯದಲ್ಲಿ ಯಾಜಕತ್ವವನ್ನು ನಡಿಸುವವರು. ಮೋಶೆಯು ದೇವದರ್ಶನಗುಡಾರವನು ಮಾಡುವದಕ್ಕಿದ್ದಾಗ ಬೆಟ್ಟದಲ್ಲಿ ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನು ಮಾಡಿಸಬೇಕು....."

ಹೌದು! ಹೀಗೆ ದೇವದರ್ಶನ ಗುಡಾರವನ್ನು "ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪ ಅಥವಾ "ಛಾಯೆ"ಯಾಗಿ ದೇವರು ಕೊಟ್ಟಿದ್ದನ್ನು ಇಲ್ಲಿ ನೋಡುತ್ತೇವೆ.

ಮೊದಲು ನಾವು ದೇವದರ್ಶನ ಗುಡಾರದ ವಿವಿಧ ಭಾಗಗಳ ಬಗ್ಗೆ ಅಧ್ಯಯನ ಮಾಡೋಣ.

ಆನಂತರ, ಇಲ್ಲಿ ಸೂಚಿಸಲಾಗಿರುವ "ಪರಲೋಕದಲ್ಲಿರುವ ದೇವಾಲಯ" ಅಥವಾ ಆತ್ಮೀಕವಾದ ವಿಷಯಗಳ ಬಗ್ಗೆ ತಿಳಿದುಕೊಳ್ಳೋಣ.

**ವಿಮೋಚನಾಕಾಂಡ 27:9–19**

"ಗುಡಾರಕ್ಕೆ ಅಂಗಳವನ್ನು ಏರ್ಪಡಿಸಬೇಕು.... ಆ ಅಂಗಳದ ತೆಂಕಣ ಕಡೆಯಲ್ಲಿ ತೆರೆಗಳು ಇರಬೇಕು.... ಅಂಗಳದ ಗೊಡೆಗಳೂ ತಾಮ್ರದವುಗಳಾಗಿರಬೇಕು."

ಹೌದು! ಹೀಗೆ ಈ ಹೊರಗಿನ ವಠಾರ ಅಥವಾ ಅಂಗಳವನ್ನು ಕಟ್ಟುವ ವಿವರಣೆಯನ್ನು ನೀಡಲಾಗಿದೆ!!

ಅಂಗಳಕ್ಕಾಗಿ ಹಾಕಲ್ಪಟ್ಟಿರುವ ತೆರೆಗಳನ್ನು ಕಂಬಗಳ ನಡುವೆ ನೇತು ಹಾಕಲಾಗಿರುತ್ತದೆ. ಮತ್ತು ಪ್ರತೀ ಐದು ಮೊಳ ತೆರೆಗಳ ನಡುವೆ ಎರಡು ಕಂಬಗಳು ಇರುತ್ತವೆ. ಹೀಗೆ ಉತ್ತರ ಮತ್ತು ದಕ್ಷಿಣ ದಿಕ್ಕಿನ ದೇವದರ್ಶನಗುಡಾರದ ಉದ್ದದಲ್ಲಿ ಇಪ್ಪತ್ತು ಕಂಬಗಳೂ ಮತ್ತು ಪೂರ್ವ ಮತ್ತು ಪಶ್ಚಿಮ ದೇವದರ್ಶನ ಗುಡಾರದ ಅಗಲಕ್ಕೆ ಹತ್ತು ಕಂಬಗಳು ಇದ್ದು, ಇವುಗಳ ಒಟ್ಟಾರೆ ಮೊತ್ತ ಅರವತ್ತು ಆಗಿದೆ.

ದೇವದರ್ಶನ ಗುಡಾರದ ವಿಸ್ತೀರನ ಈ ಕೆಳಗಿನಂತಿದೆ.

ಉತ್ತರ – 100 ಮೊಳ (150 ಅಡಿ)

ದಕ್ಷಿಣ – 100 ಮೊಳ (150 ಅಡಿ)

ಪಶ್ಚಿಮ – 50 ಮೊಳ (75 ಅಡಿ)

ಪೂರ್ವ – 50 ಮೊಳ (75 ಅಡಿ)

ಈಗ ಈ ಹುರಿನಾರಿನ ಬಟ್ಟೆಯಿಂದ ಉಂಟಾದ ಅಂಗಳವು 5 ಮೊಳ ಎತ್ತರ (ವಚನ 18) ಅಥವಾ 7 1/2 ಅಡಿ ಎತ್ತರವಾಗಿತ್ತು!

ಈ ಎತ್ತರವು ಯಾವುದೇ ಮನುಷ್ಯನ ಎತ್ತರಕ್ಕಿಂತ ಹೆಚ್ಚಾಗಿತ್ತು. ಮತ್ತು ಅಂಗಳದ ಪೂರ್ವ ದಿಕ್ಕಿನಲ್ಲಿ ಮಾತ್ರ ಬಾಗಿಲು ಇರುವುದನ್ನು ಕಾಣುತ್ತೇವೆ.

ಅದು ಇಪ್ಪತ್ತು ಮೊಳ ಅಗಲವಾಗಿದ್ದು, ಐದು ಕಂಬಗಳಿಂದ ಕೂಡಿದ್ದಾಗಿದೆ ಪರದೆಯನ್ನು ಹುರಿನಾರಿನ ಬಟ್ಟೆಯಲ್ಲಿ ನೀಲಿ ಧೂಮ್ರರಕ್ತವರ್ಣಗಳುಳ್ಳ ದಾರದಿಂದ ಬಟೇದಾರೀ ಕೆಲಸದವರ ಕೈಯಿಂದ ಮಾಡಿಸಲಾಗಿರುತ್ತದೆ.

ಈ ಸುಂದರವಾದ ಬಾಗಿಲು ಮಾತ್ರ ದೇವದರ್ಶನ ಗುಡಾರದ ಒಳಕ್ಕೆ ಹೋಗಲು ಒಂದೇ ದಾರಿಯಾಗಿದೆ.

ಇಷ್ಟು ಎತ್ತರವಾದ ಅಂಗಳದ ಹೊರಗಿನಿಂದ ನಿಂತು ಬಳಕ್ಕೆ ನೋಡುವ ಅವಕಾಶ ಯಾರಿಗೂ ಇರುವುದಿಲ್ಲ. ಏನೂ ಕಾಣಿಸುವುದು ಇಲ್ಲ.

ಇದಿಷ್ಟೂ ದೇವದರ್ಶನ ಗುಡಾರದ ಹೊರಾಂಗಣದ ವಿವರಣೆಯಾಗಿದೆ.

ಇವುಗಳೆಲ್ಲವೂ ಏನನ್ನು ಸೂಚಿಸುತ್ತವೆ?

ನಾವು ಈಗಾಗಲೇ ಹಿಬ್ರಯರಿಗೆ 8:5ರಲ್ಲಿ ಓದಿರುವಂತೆ, ದೇವದರ್ಶನ ಗುಡಾರವು "ಪರಲೋಕದಲ್ಲಿರುವ ದೇವಾಲಯ"ದ ಪ್ರತಿರೂಪವು ಅಥವಾ ಶ್ರೇಷ್ಠವಾದ "ಆತ್ಮೀಕ" ವಿಷಯಗಳಿಂದ ಕೂಡಿದ ಛಾಯೆಯಾಗಿದೆ.

ಮೊದಲು ದೇವದರ್ಶನ ಗುಡಾರದ ಅರ್ಥವನ್ನು ಮತ್ತು ಅದರಲ್ಲಿರುವ ವಿಷಯಗಳ ಮಹತ್ವವನ್ನು ನೋಡಿ ಆನಂತರ ಅವುಗಳ "ಆತ್ಮೀಕ ಅರ್ಥ"ಗಳನ್ನು ಅರಿತುಕೊಳ್ಳೋಣ!

ಇಸ್ರಾಯೇಲ್ಯರು ದೇವದರ್ಶನ ಗುಡಾರದ ನಾಲ್ಕು ದಿಕ್ಕುಗಳಾದ ಉತ್ತರ, ದಕ್ಷಿಣ, ಪೂರ್ವ ಪಶ್ಚಿಮಗಳಲ್ಲಿ ನೇಮಿಸಿದ ಅಂತರದಲ್ಲಿ ತಮ್ಮ ತಮ್ಮ ಡೇರೆಗಳನ್ನು ಹಾಕಿಕೊಂಡಿರುವುದು ಇಡೀ ಮನುಕುಲಕ್ಕೆ ಸೂಚನೆಯಾಗಿದೆ. ಎಲ್ಲಾ ದಿಕ್ಕುಗಳಲ್ಲಿ ಇರುವ ಇವರು ದೇವರ ಜ್ಞಾನದಿಂದ ಹೊರಗೆ ಇರುವುದಕ್ಕೆ ಅನ್ವಯಿಸುತ್ತದೆ.

ಇಸ್ರಾಯೇಲ್ಯರಿಗೆ ಈ ಎತ್ತರವಾದ (7 1/3 ಅಡಿ) ಗೋಡೆಯು ಅವಿಶ್ವಾಸವನ್ನು ಹೊಂದಿರುವ ಅರ್ಥವನ್ನು ವ್ಯಕ್ತಪಡಿಸುತ್ತದೆ. ಇದರ ಬಗ್ಗೆ ಕೆಳಗಿನಂತೆ ಓದುತ್ತೇವೆ –

**1 ಕೊರಿಂಥದವರಿಗೆ 2:14**

"ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಅಂಗೀಕರಿಸುವದಿಲ್ಲ; ಅವು ಅವನಿಗೆ ಹುಚ್ಚುತನವಾಗಿ ತೋರುತ್ತವೆ; ಇಲ್ಲವೆ ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು."

ಹೌದು! ಪ್ರಕೃತ ಮನುಷ್ಯನು (ಪ್ರಪಂಚದ ಮನುಷ್ಯನು) ಆತ್ಮೀಕ ವಿಚಾರದಿಂದ ಕೂಡಿದ ದೇವರ ವಿಷಯಗಳನ್ನು ಪವಿತ್ರ ಆತ್ಮವು ಸಿಗುವವರೆಗೆ ಗ್ರಹಿಸಿಕೊಳ್ಳಲಾರನು. ಯಾಕೆಂದರೆ ದೇವರು ಇದುವರೆಗೆ ಎಲ್ಲಾ ಮನುಷ್ಯರ ಮೇಲೆ ತಮ್ಮ ಆತ್ಮವನ್ನು ಬರಮಾಡಿಲ್ಲ.

ಹೀಗೆ ಲೋಕವು ದೇವರ ವಿಚಾರಗಳಿಗೆ ಅವಿಶ್ವಾಸಿಗಳು ಹಾಗೂ ಕುರುಡರ ಆಗಿದ್ದು ಡೇರೆಯೆಂಬ ಸ್ಥಿತಿಯಲ್ಲೇ ಉಳಿಯುತ್ತದೆ.

ಈಗ ಯಾರಾದರೂ ದೇವದರ್ಶನ ಗುಡಾರದ ಒಳಕ್ಕೆ ಪ್ರವೇಶಿಸಲು ಅಪೇಕ್ಷಿಸಿದರೆ, ಅವನು/ಅವಳು ಪೂರ್ವದಿಕ್ಕಿಗೆ ಇರುವ ಬಾಗಿಲ ಹತ್ತಿರಕ್ಕೆ ಸಮೀಪಿಸಬೇಕು.

ಇದು ಏನನ್ನು ಸೂಚಿಸುತ್ತದೆ?

**ಯೋವಾನ 10:9/14:6**

"ನಾನೇ ಆ ಬಾಗಲು; ನನ್ನ ಮುಖಾಂತರವಾಗಿ ಯಾವನಾದರೂ......."

"ಯೇಸು ಅವರಿಗೆ– ನಾನೇ ಮಾರ್ಗವೂ........"

ಹೌದು! ದೇವದರ್ಶನ ಗುಡಾರದ ಒಳಗೆ ಪ್ರವೇಶಿಸಲು ಇರುವ ಬಾಗಿಲು ಅಥವಾ ಮಾರ್ಗ ಎಂಬುದು ಯೇಸು ಕ್ರಿಸ್ತನನ್ನು ಸೂಚಿಸುತ್ತದೆ. ಹಾಗೂ ಅವರ ಮೇಲಿನ ನಂಬಿಕೆಯ ಮುಖಾಂತರವೇ. ಪ್ರತಿಯೊಬ್ಬನೂ

ದೇವರ ವಿಚಾರಗಳ ಜ್ಞಾನಕ್ಕೆ ಪ್ರವೇಶಿಸಬಹುದು. ಅದಕ್ಕಾಗಿಯೇ ಅವರು ಯೋವಾನ 14:6 ರಲ್ಲಿ ಹೀಗೆ ಹೇಳುತ್ತಾರೆ – "ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ."

ಹೌದು! ಯೇಸುಕ್ರಿಸ್ತನ ಮೇಲಿನ ನಂಬಿಕೆಯು ದೇವರೊಡನೆ ಸಂಧಾನ ಮಾಡಿಕೊಳ್ಳುವುದಕ್ಕೆ ಇರುವ ಒಂದೇ ಒಂದು ಮಾರ್ಗವಾಗಿದೆ.

ಈಗ ಯೇಸುಕ್ರಿಸ್ತನೆಂದು ಸೂಚಿಸಲ್ಪಟ್ಟಿರುವ ಈ "ಬಾಗಿಲಿ"ನ ಬಗ್ಗೆ ಕೆಳವು ಆತ್ಮೀಕ ಪಾಠಗಳನ್ನು ಕಲಿತುಕೊಳ್ಳಬೇಕಾಗಿದೆ.

ಗೋಡೆಯ ನಡುವೆ ಹಾಕಲ್ಪಟ್ಟಿರುವ "ಬಿಳಿಯ ನಾರುಬಟ್ಟೆ"ಯು ಯೇಸುಕ್ರಿಸ್ತನ ಪರಿಶುದ್ಧತೆ ಮತ್ತು ನೀತಿವಂತಿಕೆಯನ್ನು ತೋರ್ಪಡಿಸುತ್ತದೆ. ಒಬ್ಬನು ಇದರ ಮೂಲಕವಾಗಿ ಪ್ರವೇಶಿಸುವಾಗ ತನ್ನನ್ನೇ ಬಿಳಿಯ ಗೋಡೆಯೊಳಗೆ ಕೊಂಡುಬರುತ್ತಾನೆ. ಹೀಗೆ ಒಬ್ಬ ಪಾಪಿಯು ಕ್ರಿಸ್ತನ ಮೇಲೆ ನಂಬಿಕೆ ಇಡುವಾಗ ತನ್ನ ಪಾಪಗಳಿಗೆ ಹೊದಿಕೆಯನ್ನು ಸ್ವೀಕರಿಸಲ್ಪಟ್ಟು, ನೀತಿವಂತನೆಂದು ನಿರ್ಣಯಿಸಲ್ಪಡುವುದನ್ನು ಇದು ವ್ಯಕ್ತಪಡಿಸುತ್ತದೆ.

**ಅಪೋಸ್ತಲ ಕೃತ್ಯಗಳು 10:43**

"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿಹೇಳಿದ್ದಾರೆ ಅಂದನು."

ಹೌದು! ಯೇಸುಕ್ರಿಸ್ತನ ಮೇಲಣ ನಂಬಿಕೆಯು ಪಾಪಿಗೆ "ಬಿಳಿಯ ಗೋಡೆ"ಯೆಂಬ ಹೊದಿಕೆಯನ್ನು ನೀಡುತ್ತದೆ.

ಒಬ್ಬನು "ಬಾಗಿಲ"ನ್ನು ಪ್ರವೇಶಿಸುವಾಗ, ಅದರ ಬಟ್ಟೆಯನ್ನು "ಬುಡೇದಾರಿ ಕೆಲಸ"ದಿಂದ ಮಾಡಿಸಲಾಗಿ, ಒಂದೊಂದೂ ಐದು ಮೊಳದಿಂದ ಕೂಡಿದ ನಾಲ್ಕು ವಿಭಾಗಗಳಿರುವುದನ್ನು ಗಮನಿಸುತ್ತಾನೆ.

ಪ್ರತಿಯೋಬ್ಬನಿಗೂ ಯೇಸುಕ್ರಿಸ್ತನು ಸತ್ಯವೇದದ ನಾಲ್ಕು ಸುವಾರ್ತೆಗಳಾದ ಮತ್ತಾಯ, ಮಾರ್ಕ, ಲೂಕ ಹಾಗೂ ಯೋವಾನ ಗ್ರಂಥಗಳ ಮೂಲಕ ಪರಿಚಯವಾಗುವುದನ್ನು ಸೂಚಿಸುತ್ತದೆ. ಇದು ಕ್ರಿಸ್ತನ ಜೀವನ ಮತ್ತು ಮರಣದ ದಾಖಲೆಗಳನ್ನು ಒದಗಿಸುತ್ತದೆ.

ಈ ನಾಲ್ಕು ವಿಭಾಗ ಹಾಗೂ ಐದು ಮೊಳವಿರುವ ಬಟ್ಟೆಯನ್ನು ಹಿಡಿದುಕೊಳ್ಳಲು ಒಂದು "ಹೆಚ್ಚಿನ" ಕಂಬ ಬೇಕಾಗಿರುವುದು ಎಂದರೆ, ಈ ಮೇಲಿನ ನಾಲ್ಕು ಸುವಾರ್ತೆಗಾರರ ಜೊತೆಗೆ ಇನ್ನೊಬ್ಬ ಸುವಾರ್ತೆಗಾರನಾದ ಅಪೋಸ್ತಲ ಪೌಲನು ಕೂಡ ತಮ್ಮ 14 ಪತ್ರಗಳಲ್ಲಿ ಕ್ರಿಸ್ತನ ಬಗ್ಗೆ ಸಾಕ್ಷಿ ಕೊಡುವುದನ್ನು ಸೂಚಿಸುತ್ತದೆ. ಈ ಪತ್ರಗಳು ಹೊಸ ಒಡಂಬಡಿಕೆಯ 1/3ನೇ ಭಾಗವನ್ನು ಆವರಿಸುತ್ತದೆ.

ಅಂತಿಮವಾಗಿ "ಬಾಗಿಲಿ"ನ ಬಟ್ಟೆಗೆ ಉಪಯೋಗಿಸಲ್ಪಟ್ಟಿರುವ ಬಣ್ಣವುಳ್ಳ ದಾರೆಗಳು ಕ್ರಿಸ್ತನ ಗುಣಗಳನ್ನು ವರ್ಣಿಸುತ್ತದೆ.

ಕಡುಗೆಂಪು – ಕ್ರಿಸ್ತನು ಲೋಕದ ವಿಮೋಚನಾಗುವುದಕ್ಕೋಸ್ಕರ ಶಿಲುಬೆಯ ಮೇಲೆ ಸುರಿಸಿದ ಈ ಡುಬಲಿಯ ರಕ್ತವನ್ನು ಸೂಚಿಸುತ್ತದೆ.

ನೀಲಿ – ಇದು ನೀತಿಯನ್ನು ಸೂಚಿಸುತ್ತದೆ. ಆಕಾಶ ಮತ್ತು ಅದರ ಬಣ್ಣವು ದೇವರ ನೀತಿಯನ್ನು ಸೂಚಿಸುತ್ತದೆ. ಹಾಗೆಯೇ ಯೇಸುಕ್ರಿಸ್ತನೂ ದೇವರ ನೀತಿವಂತ ಮಗನೆಂದು ತೋರ್ಪಡಿಸುತ್ತದೆ.

ನೀಲಿಧೂಮ್ರ – ಇದು "ರಾಜವೈಭವ"ವನ್ನು ಮತ್ತು ಈಗ ಕ್ರಿಸ್ತನು ರಾಜಾಧಿರಾಜನು ಆಗಿರುವುದನ್ನು ಸೂಚಿಸುತ್ತದೆ. ಕಡುಗೆಂಪು ಮತ್ತು ನೀಲಿ ಬಣ್ಣವನ್ನು ಬೆರೆಸುವುದರಿಂದ ನೀಲಿಧೂಮ್ರವರ್ಣವು ಉಂಟಾಗುತ್ತದೆ.

ಹೀಗೆ ಇದು ದೇವದರ್ಶನ ಗುಡಾರದ ಹೊರಾಂಗಣದ ಆತ್ಮೀಕ ಪ್ರಾಮುಖ್ಯತೆಯಾಗಿದೆ.

ದೇವದರ್ಶನ ಗುಡಾರದ ಬಾಗಿಲಿನ ಮೂಲಕ ಒಳಗೆ ಪ್ರವೇಶಿಸಿದ ನಂತರ ಒಬ್ಬನು ಮೊದಲು ಕಾಣುವುದನ್ನು ಹೀಗೆ ಓದುತ್ತೇವೆ.

**ವಿಮೋಚನಾಕಾಂಡ 40:29**

"ಯೆಹೋವನು ಆಜ್ಞಾಪಿಸಿದಂತೆಯೇ ದೇವದರ್ಶನದ ಗುಡಾರದ ಬಾಗಿಲಿನ ಮುಂದೆ ಯಜ್ಞವೇದಿಯನ್ನು ಇಟ್ಟು ಅದರ ಮೇಲೆ ಸರ್ವಾಂಗಹೋಮವನ್ನೂ ಧಾನ್ಯಸಮರ್ಪಣೆಯನ್ನು ಮಾಡಿದರು."

ಯಜ್ಞವೇದಿ

ಇದರ ಪೂರ್ಣ ವಿವರಣೆಯನ್ನು ವಿಮೋಚನಾಕಾಂಡ 27:1–8ರಲ್ಲಿ ಓದಬಹುದು.

ಹೌದು! ಬಾಗಿಲನ್ನು ಪ್ರವೇಶಿಸಿದ ಕೂಡಲೇ, ಸರ್ವಾಂಗ ಹೋಮವನ್ನು ಅರ್ಪಿಸುವ ಯಜ್ಞವೇದಿ ಅಥವಾ ತಾಮ್ರದ ಯಜ್ಞವೇದಿಯನ್ನು ಇಡಲಾಗಿತ್ತು.

ಈ ಯಜ್ಞವೇದಿಯನ್ನು ಮರದಿಂದ ಮಾಡಿ ತಾಮ್ರದಿಂದ ಅದನ್ನು ಹೊದಿಸಲಾಗಿತ್ತು.

ಇದು 7 1/2 ಅಡಿ ಉದ್ದದ ಚೌಕ ಹಾಗೂ ಅಗಲವಾಗಿಯೂ 4 1/2 ಅಡಿ ಎತ್ತರವಾಗಿಯೂ ಇತ್ತು.

ಇದು ಏನನ್ನು ಸೂಚಿಸುತ್ತದೆ?

ಇ ಒಬ್ಬನು ಬಾಗಿಲಿನ ಮೂಲಕ ಪ್ರವೇಶಿಸಿದ ಕೂಡಲೇ ಅವನ ಕಣ್ಣಿಗೆ ಕಾಣುವ ಮತ್ತು ಗಮನ ಸೆಳೆಯುವ ಮೊದಲ ವಸ್ತುವೆಂದರೆ ಬಹು ದೊಡ್ಡದಾಗಿರುವ ಯಜ್ಞವೇದಿ. ಹಾಗೆಯೇ ಆತ್ಮೀಕವಾಗಿ ಧ್ಯಾನಿಸುವಾಗ, ಕ್ರಿಸ್ತನ ಮೇಲೆ ನಂಬಿಕೆಯಿಟ್ಟ ಮೇಲೆ ಒಬ್ಬನ ಗಮನವನ್ನು ಸೆಳೆಯುವ ಮೊದಲ ಅಂಶವೆಂದರೆ, ಕ್ರಿಸ್ತನು ಕಲ್ವಾರಿ ಶಿಲುಬೆಯ ಮೇಲೆ ಅರ್ಪಿಸಿದ ಶ್ರೇಷ್ಠವಾದ ಈಡುಬಲಿ.

ಹೌದು! ಈ ಯಜ್ಞವೇದಿಯು ಕ್ರಿಸ್ತನು ಕಲ್ವಾರಿ ಶಿಲುಬೆಯ ಮೇಲೆ ಅರ್ಪಿಸಿದ "ಬಲಿ"ಯನ್ನು ಸೂಚಿಸುತ್ತದೆ.

**1 ತಿಮೊಥೆಯನಿಗೆ 2:5–6**

"ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನೂ ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು."

ಯಜ್ಞವೇದಿಯ ನಂತರ ಕಾಣುವ ವಸ್ತುವೆಂದರೆ, ತಾಮ್ರದ ಗಂಗಾಳ

**ವಿಮೋಚನಾಕಾಂಡ 30:17–21/40:30–32**

"ಯೆಹೋವನು ಮೋಶೆಗೆ ಹೇಳಿದ್ದೇನೆಂದರೆ – ಸ್ನಾನಕ್ಕೋಸ್ಕರ ಒಂದು ತಾಮ್ರದ ಗಂಗಾಳವನ್ನೂ........ ಇದು ಅವನಿಗೂ ಅವನ ಸಂತತಿಯವರಿಗೂ ಶಾಶ್ವತ ನಿಯಮ.."

"ಯೆಹೋವನು ಆಜ್ಞಾಪಿಸಿದಂತೆ ಮೋಶೆ ದೇವದರ್ಶನ ಗುಡಾರಕ್ಕೂ ಯಜ್ಞವೇದಿಗೂ ನಡುವೆ ಗಂಗಳವನ್ನು...... ಕೈಕಾಲುಗಳನ್ನು ತೊಳಕೊಳ್ಳುವರು."

ಹೌದು! ಈ ಗಂಗಾಳವು ಅಂಗಳದಲ್ಲಿರುವ ಯಜ್ಞವೇದಿಯ ಮತ್ತು ದೇವದರ್ಶನ ಗುಡಾರದ ಡೇರೆಯ ನಡುವೆಯೂ ಇರಬೇಕಾಗಿತ್ತು.

ಇದನ್ನು ತಾಮ್ರದಿಂದ ಮಾಡಲಾಗಿದ್ದು, ಲೇವಿಯರು ಮತ್ತು ಯಾಜಕರು ಇದರಲ್ಲಿರುವ ನೀರಿನಿಂದ ತಮ್ಮ ಕೈಕಾಲುಗಳನ್ನು ತೊಳೆದುಕೊಳ್ಳುತ್ತಿದ್ದರು.

ದೇವರು ಆರೋನನಿಗೆ (ಮಹಾಯಜಕ) ಮತ್ತು ಅವನ ಮಕ್ಕಳಿಗೆ (ಯಾಜಕರಿಗೆ) ದೇವದರ್ಶನ ಗುಡಾರದಲ್ಲಿರುವ ಯಜ್ಞವೇದಿ ಮತ್ತು ಪರಿಶುದ್ಧ ಸ್ಥಳದಲ್ಲಿ ಯಾವುದೇ ಸೇವೆ ಮಾಡುವುದಕ್ಕೆ ಮೊದಲು "ಕೈಕಾಲುಗಳನ್ನು" ತೊಳೆಯಬೇಕೆಂದು ಆಜ್ಞಾಪಿಸಿದ್ದರು. ಹೀಗೆ ತೊಳೆಯದೆ ಹೋದರೆ ಅವರು ಸಾಯುವರು.

ಇವೆಲ್ಲವು ಏನನ್ನು ಅರ್ಥೈಸುತ್ತದೆ?

ನಾವು ಈಗಾಗಲೇ ನೋಡಿರುವಂತೆ ಯಜ್ಞವೇದಿಯು ಕ್ರಿಸ್ತನ ಶ್ರೇಷ್ಠವಾದ ಬಲಿಯನ್ನು ಸೂಚಿಸುತ್ತದೆ. ಒಬ್ಬ "ನಂಬಿಗಸ್ತ"ನು ಈ ತ್ಯಾಗದ ಪ್ರಾಮುಖ್ಯತೆಯನ್ನು ತಿಳಿದುಕೊಂಡ ಮೇಲೆ; ಇವುಗಳೆಲ್ಲವು ಕ್ರಿಸ್ತನ ಬಗ್ಗೆ ಸತ್ಯವೇದದ ಸುವಾರ್ತೆಗಳಲ್ಲಿ ದಾಖಲಾಗಿರುವ ಎಲ್ಲಾ ಸತ್ಯಗಳ ಮೂಲಕ ಎಂದು ಅರ್ಥಮಾಡಿಕೊಳ್ಳುತ್ತಾನೆ.

ಹೀಗೆ "ನಂಬಿಗಸ್ತ"ನು ದೇವರ ವಾಕ್ಯವೆಂಬ ಸತ್ಯವೇದಕ್ಕೆ ಪರಿಚಯಿಸಲ್ಪಡುತ್ತಾನೆ.

ಇದನ್ನೇ "ಗಂಗಾಳ"ದ ಮೂಲಕ ಸೂಚಿಸಲಾಗಿದೆ!

ಪ್ರಾರಂಭದಲ್ಲಿ ಗ್ರಹಿಸಿಕೊಳ್ಳುವಾಗ ಸತ್ಯವೇದವು ನಮ್ಮನ್ನು ಶುದ್ಧೀಕರಿಸುವ ನೀರಿನಂತೆ ಗೋಚರವಾಗುತ್ತದೆ.

**ಎಫೆಸದವರಿಗೆ 5:27**

"ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು."

ಹೌದು! ಹೇಗೆ ನೀರು "ಕೈ" ಮತ್ತು "ಕಾಲಿ"ನ ಕೊಳೆಯನ್ನು ಹೋಗಲಾಡಿಸುತ್ತದೋ, ಹಾಗೆಯೇ, ಸತ್ಯವಾಕ್ಯವು ಕೂಡ ಕ್ರೀಯೆಗಳನ್ನು (ಕೈಗಳು) ಮತ್ತು ಜೀವನದ ದಾರಿಯನ್ನು (ಕಾಲುಗಳು) ಶುದ್ಧೀಕರಿಸುವಂತೆ ಮಾಡುತ್ತದೆ.

ಉದಾಹರಣೆಗೆ: ಕೆಟ್ಟ ಮಾತುಗಳನ್ನಾಡುವುದು, ಕುಡಿಯುವುದು, ದೂಮಪಾನ ಮಾಡುವುದು, ಜೂಜಾಡುವುದು, ಇತ್ಯಾದಿಗಳು.......

ಈಗ "ಅಂಗಳ"ವೆಂದು ಕರೆಯಲ್ಪಡುವ ಈ ಸ್ಥಳವು ಕ್ರಿಸ್ತೀಯ ಜೀವನದ ಬೆಳವಣಿಗೆಯ ಮೊದಲ ಹಂತವಾದ "ಕರೆಯಲ್ಪಟ್ಟ" ಹಂತವನ್ನು ಸೂಚಿಸುತ್ತದೆ. (ಮತ್ತಾಯ 22:14). ಅಥವಾ ಕೇವಲ ನಂಬಿಗಸ್ತರಾಗಿರುವ ಸ್ಥಿತಿಯನ್ನು ಸೂಚಿಸುತ್ತದೆ.

ಇಲ್ಲಿ ಯಜ್ಞವೇದಿ ಮತ್ತು ಗಂಗಾಳವು, ಕ್ರಿಸ್ತನ ಬಲಿಯ ಮೇಲಣ ನಂಬಿಕೆ ಮತ್ತು ಸತ್ಯವೇದದ ಅಧ್ಯಯನವೆಂಬ ಅರ್ಥವನ್ನು ವ್ಯಕ್ತಪಡಿಸುತ್ತದೆ.

ಹಳೆಯ ದೇವದರ್ಶನ ಗುಡಾರದಲ್ಲಿ ನೇಮಕ ಮಾಡಲ್ಪಟ್ಟಿರುವ ಲೇವಿಯರು(ಯಾಜಕಕಾಂಡ :5–10) ಈ ನಂಬಿಗಸ್ತರನ್ನು ಸೂಚಿಸುತ್ತಾರೆ. ಆದರೆ "ಪರಿಶುದ್ಧ"ದೊಳಗೆ ಪ್ರವೇಶಿಸಲು ಯಾಜಕರುಗಳಿಗೆ ಮಾತ್ರ ಅನುಮತಿ ಇರುವುದು ಕ್ರಿಸ್ತೀಯ ಜೀವನದ ಎರಡನೆಯ ಹಂತವನ್ನು ಸೂಚಿಸುತ್ತದೆ ಅಂದರೆ, "ಆಯಲ್ಪಟ್ಟ ಹಂತ" ಅಥವಾ ಕ್ರಿಸ್ತನ "ಹಿಂಬಾಲಕ"ರಾಗಿರುವ ಸ್ಥಿತಿ.

ಇವರು ತಮ್ಮದೆಲ್ಲವನ್ನು ಕ್ರಿಸ್ತನಿಗಾಗಿ ಸಮರ್ಪಿಸಿದ್ದಾರೆ.

**ಮತ್ತಾಯ 16:24 –** "ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ......"

ಮತ್ತು ದೇವರ ಇಷ್ಟಾರ್ಥ ಮತ್ತು ಸೇವೆಯನ್ನು ಮಾಡುವುದಕ್ಕೆ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಟ್ಟಿದ್ದಾರೆ. (ಈ ಬಗ್ಗೆ ತರಗತಿ 17/18/19 ರಲ್ಲಿ ವಿವರವಾಗಿ ಧ್ಯಾನಿಸಿದ್ದೇವೆ.)

ಈಗ ನಾವು ದೇವದರ್ಶನ ಗುಡಾರದ ಪ್ರಮುಖವಾದ ಭಾಗಕ್ಕೆ ಬರೋಣ...

ಪರಿಶುದ್ಧ

"ಪರಿಶುದ್ಧ"ಕ್ಕೆ ಹೋಗಬೇಕಾದರೆ ಪರದೆಯ ಮೂಲಕ ಸಾಗಬೇಕು.

**ವಿಮೋಚನಾಕಾಂಡ 26:36**

"ಡೇರೆಯ ಬಾಗಲಿಗೆ ಹುರಿನಾರಿನ ಬಟ್ಟೆಯಲ್ಲಿ ನೀಲಿ ಧೂಮ್ರ ರಕ್ತವರ್ಣಗಳುಳ್ಳ ಧಾರದಿಂದ ವಿಚಿತ್ರವಾಗಿ ಕಸೂತಿಹಾಕಿ ಪರದೆಯನ್ನು ಮಾಡಿಸಬೇಕು."

ಹೌದು! ಇದು "ಪರಿಶುದ್ಧ"ದ ಪ್ರವೇಶ ದ್ವಾರ.

ದೇವದರ್ಶನ ಗುಡಾರದ ಬಾಗಿಲಿಗೆ ಹಾಕಿದ ತೆರೆಯಂತೆಯೇ ಈ ಪರದೆಯನ್ನೂ ಕೂಡ ಕಸೂಲೆಹಾಕಿದ ನೀಲಿ, ಕಡುಗೆಂಪು ಹಾಗೂ ನೀಲಿಧೂಮ್ರ ವರ್ಣಗಳಿಂದ ಮಾಡಲಾಗಿತ್ತು. ಲೇವಿಯರಿಗೆ ಇದರ ಒಳಗೆ ಪ್ರವೇಶವಿರಲಿಲ್ಲ ಒಂದು ವೇಳೆ ಪ್ರವೇಶಿಸಲು ಪ್ರಯತ್ನಿಸಿದರೆ ಅವರು ಸಾಯುವರು.

ಕೇವಲ ಯಾಜಕರು ಮಾತ್ರ ಪರದೆಯ ಮೂಲಕ ಪರಿಶುದ್ಧದೊಳಗೆ ಪ್ರವೇಶಿಸಲು ಅವಕಾಶವಿತ್ತು.

ಇದು ಏನನ್ನು ಸೂಚಿಸುತ್ತದೆ?

ಈ "ಪರದೆ"ಯು ಒಂದು ಸಾಧನವಾಗಿದ್ದು, ಇದರ ಮೂಲಕವಾಗಿ ಒಬ್ಬನು ಅಂಗಳವನ್ನು ಬಿಟ್ಟು, "ಪರಿಶುದ್ಧ"ದೊಳಗೆ ಪ್ರವೇಶಿಸಬಹುದು.

ಈ ಸಾಧನದ ಮೂಲಕವಾಗಿಯೇ ನಂಬಿಗಸ್ತನಾಗಿರುವವನು ಹಿಂಬಾಲಕನಾಗುತ್ತಾನೆ. ಹೀಗೆ ಕರೆಯಲ್ಪಟ್ಟವನು ಆರಿಸಲ್ಪಟ್ಟವನು ಎನಿಸಿಕೊಳ್ಳುತ್ತಾನೆ.

ಕೀರ್ತನೆ 50:5ರಲಿ ಓದುವಂತೆ "ಯಜ್ಞದ ಮೂಲಕ ಒಡಂಬಡಿಕೆ"ಯನ್ನು ಮಾಡಿಕೊಳ್ಳುವುದು.

ಎಫೆಸದವರಿಗೆ 4:5ರಲ್ಲಿ ಹೇಳುವ ಪ್ರಕಾರ ಇದು "ಕ್ರಿಸ್ತೀಯ ಜ್ಞಾನಸ್ನಾನ" ಅಂದರೆ ಒಂದೇ ಜ್ಞಾನಸ್ನಾನದ ಸ್ಥಳವಾಗಿದೆ ಮತ್ತು ಈ ಕೆಳಗಿನ ಕೀರ್ತನೆಯಲ್ಲಿ ಓದುವಂತೆ "ರಹಸ್ಯ ಒಡಂಬಡಿಕೆ"ಯ ಚಿಹ್ನೆಯಾಗಿದೆ.

**ಕೀರ್ತನೆಗಳು 25:14**

"ಯೆಹೋವನು ತನ್ನ ಸದ್ಭಕ್ತರಿಗೆ ಆಪ್ತಮಿತ್ರನಂತಿರುವನು; ಅವರಿಗೆ ತನ್ನ ಒಡಂಬಡಿಕೆಯ ಅನುಭವವನ್ನು ದಯಪಾಲಿಸುವನು."

ಯಜ್ಞದ ಮೂಲಕ ಮಾಡಿಕೊಳ್ಳುವ ಈ ರಹಸ್ಯವಾದ ಒಡಂಬಡಿಕೆಯು ಸತ್ಯವೇದದಲ್ಲಿ ಹೇಳಲಾಗಿರುವ "ಒಂದೇ ಜ್ಞಾನಸ್ನಾನ"ದ ಚಿಹ್ನೆಯಾಗಿದೆ.

ಹೌದು! ರೋಮಾಪುರದವರಿಗೆ 6:3 ಮತ್ತು ಕೊಲೊಸ್ಸೆಯವರಿಗೆ 3:3 ರಲ್ಲಿ ಹೇಳಿರುವ ಪ್ರಕಾರ ನಾವು ನಮ್ಮನ್ನೇ ಸಂಪೂರ್ಣವಾಗಿ ತ್ಯಜಿಸುವುದರ ಮೂಲಕ ಈ ಲೋಕಕ್ಕೆ ಮತ್ತು ಅದರ ಇಚ್ಛೆಗಳಿಗೆ ಸಾಯುವುದನ್ನು ಇದು ಸೂಚಿಸುತ್ತದೆ.

ಈಗ ನಾವು "ಪರಿಶುದ್ಧ"ಕ್ಕೆ ಹೋಗೋಣ.

"ಪರಿಶುದ್ಧ"ರ ವಿಸ್ತೀರ್ಣವು 10 ಮೊಳ ಎತ್ತರ ಹಾಗೂ 20 ಮೊಳ ಉದ್ದ–ಅಗಲವುಳ್ಳದ್ದಾಗಿದೆ. ಅಂದರೆ 15 ಅಡಿ 30 ಅಡಿ. ಒಳಗೆ ಪ್ರವೇಶಿಸುತ್ತಲೇ. ಇದರ ಬಲಬದಿಯಲ್ಲಿ ಅಥವಾ ಉತ್ತರ ದಿಕ್ಕಿನಲ್ಲಿ ನೈವೇದ್ಯ ರೊಟ್ಟಿಗಳನ್ನು ಕಾಣುತ್ತೇವೆ.

**ಯಾಜಕಕಾಂಡ 24:5–6**

"ಅದಲ್ಲಿದೆ ನೀನು ಗೋದಿಯ ಹಿಟ್ಟಿನಿಂದ ಹನ್ನೆರಡು ರೊಟ್ಟಿಗಳನ್ನು ಮಾಡಬೇಕು ಪ್ರತಿಯೊಂದು ರೊಟ್ಟಿಯು ಆರಾರು ಸೇರಿನದಾಗಿರಬೇಕು. ಅವುಗಳನ್ನು ಆರಾರರ ಮೇರೆಗೆ ಎರಡು ರಾಶಿಗಳಾಗಿ ಚೊಕ್ಕಬಂಗಾರದ ಮೇಜಿನ ಮೇಲೆ ಯೆಹೋವನ ಸನ್ನಿಧಿಯಲ್ಲಿ ಇಡಬೇಕು."

ಈ ಮೇಜನ್ನು ಮರದಿಂದ ಮಾಡಲ್ಪಟ್ಟು, ಚಿನ್ನದಿಂದ ಹೊದಿಸಲಾಗಿದ್ದು ಅದರ ಮೇಲೆ ಎರಡು ಸಂಕ್ತಿಯಲ್ಲಿ ಒಂದರ ಮೇಲೆ ಒಂದರಂತೆ 12 ಹುಳಿಯಿಲ್ಲದ ರೊಟ್ಟಿಗಳನ್ನು ಇಡಲಾಗಿತ್ತು.

ಯಾಜಕಕಾಂಡ 24:9 ರಲ್ಲಿ ಹೇಳಿರುವ ಪ್ರಕಾರ ಇವುಗಳು ಪವಿತ್ರವಾಗಿದ್ದು, ಯಾಜಕರು ಮಾತ್ರ ತಿನ್ನಬಹುದಾಗಿತ್ತು ವಾರದ ಏಳನೆಯ ದಿನದಲ್ಲಿ ಅಥವಾ ಸಬ್ಬತಾದಿನದಲ್ಲಿ ಅವುಗಳನ್ನು ನವೀಕರಿಸಬೇಕಾಗಿತ್ತು.

ವಚನ 8 – ಯಾಜಕನು ಯಾವಾಗಲೂ ಪ್ರತಿ ಸಬ್ಬತಾದಿನದಲ್ಲಿ ರೊಟ್ಟಿಗಳನ್ನು ತಂದು ಯೆಹೋವನ ಸನ್ನಿಧಿಯಲ್ಲಿ ಕ್ರಮಪಡಿಸಬೇಕು.

ಇವೆಲ್ಲವು ಏನನ್ನು ಸೂಚಿಸುತ್ತದೆ?

ಇಲ್ಲಿ ಸೂಚಿಸಿರುವ ನಿಶಿಷ್ಟವಾಗಿ ಎರಡು ಪಂಕ್ತಿಯಲ್ಲಿ 12 ನೈವೇದ್ಯವಾದ ರೊಟ್ಟಿಗಳನ್ನು ಜೋಡಿಸಿರುವುದೆಂದರೆ ದೇವರು ತಮ್ಮ ವಾಕ್ಯಗಳ ಮೂಲಕ ಪೂರೈಸುವ ಆತ್ಮೀಕ ಆಹಾರವಾಗಿದೆ. ಅಂದರೆ ಸತ್ಯವೇದದ 66 ಪುಸ್ತಕಗಳು. ಈ ಆಹಾರವು ಯಾಜಕರಿಗಾಗಿ ಮಾತ್ರ ನೇಮಿಸಲ್ಪಟ್ಟಿತ್ತು. ಹಾಗೆಯೇ ಸತ್ಯವೇದದ ಆತ್ಮೀಕ ಸತ್ಯಗಳನ್ನೂ ಕೂಡ ದೇವರೊಡನೆ ಒಡಂಬಡಿಕೆ ಮಾಡಿಕೊಂಡಿರುವ ಅಥವಾ ಆರಿಸಲ್ಪಟ್ಟ ಹಾಗೂ ತಮ್ಮ ದೇಹಗಳನ್ನು ಜೀವ ಬಲಿಯಾಗಿ ಅರ್ಪಿಸಿಕೊಟ್ಟಿರುವ ಮೂಲಕ "ಯಾಜಕ"ರೆಂದು ಕರೆಯಲ್ಪಟ್ಟಿರುವವರಿಂದ ಮಾತ್ರ ಅರ್ಥಮಾಡಿಕೊಂಡು ಜೀರ್ಣಿಸಿಕೊಳ್ಳಲು ಸಾಧ್ಯ.

ನೈವೇದ್ಯನಾದ ರೊಟ್ಟಿಯನ್ನು ಸಬ್ಬತ್ ದಿನದಲ್ಲಿ ನವೀಕರಿಸುವುದೆಂದರೆ, ದೇವರ ವಿಶ್ರಾಂತಿಯನ್ನು ಸೇರಿರುವ (ಹಿಬ್ರಿಯರಿಗೆ 4:3,10) ಯಾಜಕರಿಗೆ ಪ್ರತೀ ದಿನವೂ ಸಬ್ಬತ್ ದಿನವಾಗಿದ್ದು, ಅವರು ಧೂಪವನ್ನು ಅರ್ಪಿಸುವುದು ಮತ್ತು ಸತ್ಯದ ರೊಟ್ಟಿಯಲ್ಲಿ ಪಾಲ್ಗೊಳ್ಳುವುದು, ಶಾಶ್ವತನಿಯಮದ ಪ್ರಕಾರ ಪ್ರತೀ ದಿನದ ಕೆಲಸವಾಗಿದೆ.

ಏಳು ಕೊಂಬೆಗಳ ದೀಪಸ್ತಂಭ

**ವಿಮೋಚನಕಾಂಡ 37:17–4**

"ಮತ್ತು ಚೊಕ್ಕಬಂಗಾರದ ದೀಪಸ್ತಂಭವನ್ನು ಮಾಡಿದನು. ಅದರ ಬುಡವನ್ನೂ........ ಒಂದು ತಲಾಂತು ಚೊಕ್ಕಬಂಗಾರದವುಗಳಾಗಿದ್ದವು."

ಹೀಗೆ ಚೊಕ್ಕಬಂಗಾರದ ದೀಪಸ್ತಂಭವನ್ನು ಮಾಡುವ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಇದನ್ನು ಚೊಕ್ಕಬಂಗಾರದಿಂದ ನಕಾಸಿಕೆಲಸದಿಂದ ಮಾಡಲಾಗಿ ಏಳು ಕೊಂಬೆಗಳಿಂದ ಕೂಡಿದ್ದಾಗಿದ್ದು ಮತ್ತು ಪ್ರತಿಯೊಂದು ಕೊಂಬೆಯ ಕೊನೆ ಭಾಗದಲ್ಲಿ ಹಣತೆಯಿತ್ತು. ಹೀಗೆ ಇದರಲ್ಲಿ ಏಳು ಹಣತೆಗಳಿದ್ದವು. ಪರಿಶುದ್ಧದಲ್ಲಿ ಇದರ ಬೆಳಕು ಮಾತ್ರ ಇದ್ದು ಹೊರಗಿನ ಬೆಳಕು ಒಳಗೆ ಬಾರದಂತೆ

ಅನೇಕ ಹೊದಿಕೆ ಹಾಗೂ ಪರದೆಯ ಮೂಲಕ ಸಂಪೂರ್ಣವಾಗಿ ಮುಚ್ಚಲಾಗಿತ್ತು.

ಈ ದೀಪಸ್ತಂಭದ ಏಳು ಕೊಂಬೆಗಳನ್ನು ವಿಶಿಷ್ಟ ಕೈಕೆಲಸದಿಂದ ಮಾಡಲಾಗಿ ಪ್ರತಿಯೊಂದು ಕೊಂಬೆಯಲ್ಲಿ ಬಾದಾಮಿಯ ಆಕಾರವೂ ಮತ್ತು ಪ್ರಷ್ಪಪಾತ್ರೆಯೂ, ಪ್ರಷ್ಪವೂ ಕೆತ್ತಲಾಗಿತ್ತು.

ಇದರ ಏಳು ಹಣತೆಗಳನ್ನು ಕಸಿನೊಡುವುದು (ಕತ್ತರಿಸುವುದು) ಮತ್ತು ಎಣ್ಣೆಯನ್ನು ಪೂರೈಸುವ ಕೆಲಸವನ್ನು ಮಹಾಯಾಜಕನಿಗೆ ಮಾತ್ರ ಕೊಡಲಾಗಿತ್ತು.

ಹೀಗೆ ದೀಪಸ್ತಂಭದ ಬೆಳಕಿಗೆ ಮಹಾಯಾಜಕನು ಜವಾಬ್ದಾರನಾಗಿದ್ದನು.

ಇವೆಲ್ಲವು ಏನನ್ನು ಸೂಚಿಸುತ್ತದೆ?

ಪರಿಶುದ್ಧದಲ್ಲಿ ದೀಪಸ್ತಂಭವು ಮಾತ್ರ ಬೆಳಕನ್ನು ನೀಡುವುದಾಗಿದ್ದು, ಇದು ಯಾಜಕ ತರಗತಿಯಾಗಿ ಆರಿಸಲ್ಪಟ್ಟ ಕ್ರಿಸ್ತನ ಹಿಂಬಾಲಕರಿಗೆ ನೀಡುವ ವಿಶೇಷವಾದ ಬೆಳಕಾಗಿದೆ.

**1 ಪೇತ್ರ 2:9**

"ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶೆಯಗಳನ್ನು ಪ್ರಚರಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ. ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ."

ಹೌದು! ಈ ಹಣತೆಯಲ್ಲಿರುವ ಎಣ್ಣೆಯು ಪವಿತ್ರಾತ್ಮಕ್ಕೆ ಸೂಚಕವಾಗಿದ್ದು ಮತ್ತು ಇದರಿಂದ ಬರುವ ಬೆಳಕು ಸತ್ಯದ ಬಗ್ಗೆ ಜ್ಞಾನವನ್ನು ಕೊಡುವುದಾಗಿದೆ.

**ಯೋಹಾನ 16:13**

"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು."

ಹೌದು! ಈ ಬೆಳಕು ದೇವರ ದೈವೀಕ ಯೋಜನೆಯಲ್ಲಿ ಅಡಕವಾದ ಆಳವಾದ ಸತ್ಯಗಳನ್ನು ಸಾಂಕೇತಿಕ, ಛಾಯೆ ಹಾಗೂ ಸಾಮಾತಿರೂಪವಾಗಿ ತಿಳಿಸಲಾಗಿರುವ ಪ್ರವಾದನೆಗಳು ಮತ್ತು ಮುಂದೆ ಬರಬೇಕಾದ ಸಂಗತಿಗಳ ಜ್ಞಾನವನ್ನು ತಿಳಿಸುತ್ತದೆ.

ನಿಜವಾಗಿಯೂ, ಹೇಗೆ ಲೇವಿಯರು ಸರಿಶುದ್ಧದಲ್ಲಿ ನಡೆಯುವ ಕಾರ್ಯಗಳನ್ನು ಅರಿಯಲು ಅನುಮತಿ ಇಲ್ಲವೋ, ಹಾಗೆಯೇ ಕೇವಲ ನಂಬಿಗಸ್ತನಾಗಿರುವವನು ಪರಿಶುದ್ಧದಲ್ಲಿರುವ ಬೆಳಕಿನಲ್ಲಿರುವ ಸತ್ಯದ ಜ್ಞಾನವನ್ನು ಪಡೆಯಲಾರನು.

ಮಹಾಯಾಜಕನಾಗಿ ಯೇಸುಕ್ರಿಸ್ತನು ದೀಪಸ್ತಂಭದ ಮೇಲ್ವಿಚಾರಕನಾಗಿದ್ದು ಹಾಗೂ ಸಭೆಯ ಶಿರಸ್ಸು ಆಗಿದ್ದು ಸತ್ಯದ ಬೆಳಕನ್ನು ಚೆಲ್ಲುವ ಜವಾಬ್ದಾರಿಯನ್ನು ವಯಕ್ತಿಕವಾಗಿ ನಿಭಾಯಿಸುವರು.

**ಪ್ರಕಟನೆ 1:13**

".....ಆ ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯಕುಮಾರನಂತೆ ಇರುವವನನ್ನೂ ಕಂಡೆನು ಆತನು ನಿಲುವಂಗಿಯನ್ನು ತೊಟ್ಟು......"

ಈ ದೀಪಸ್ತಂಭದ ಏಳು ಕೊಂಬೆಗಳು ಏಳು ಸಭೆಯ ಬಗ್ಗೆ ಅಡಗಿರುವ ಶ್ರೇಷ್ಠ ಸತ್ಯಗಳನ್ನು ವ್ಯಕ್ತಪಡಿಸುತ್ತದೆ. (ಇದರ ಬಗ್ಗೆ ತರಗತಿ ।45ರಲ್ಲಿ ವಿವರವಾಗಿ ಧ್ಯಾನಿಸೋಣ.)

ಅಂತಿಮವಾಗಿ ಪುಷ್ಪಪಾತ್ರೆ ಮತ್ತು ಪುಷ್ಪಗಳ ವಿನ್ಯಾಸದಲ್ಲಿ ನೋಡುವ ನಿಶಿಷ್ಟವಾದ ಕೆತ್ತನೆ ಕೌಶಲ್ಯವು ಕ್ರಿಸ್ತೀಯ ಜೀವನದಲ್ಲಿ ಬೆಳೆಸಿಕೊಳ್ಳಬೇಕಾದ ಗುಣಲಕ್ಷಣಗಳನ್ನು ಸೂಚಿಸುತ್ತದೆ.

**ಅಪೋಸ್ತಲರ ಕೃತ್ಯಗಳು 14:22**

"ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತನಂಬಿಕೆಯಲ್ಲಿ ಸ್ಥಿರವಾಗಿರ್ರಿ ಎಂದು ಅವರನ್ನು ಧೈರ್ಯಗೊಳಿಸಿದರು."

ಹೌದು! ಸಭೆಯ ಗುಣಲಕ್ಷಣಗಳು ಅನೇಕ ಸಂಕಟ ಅಥವಾ ಕೆತ್ತನೆಯ ಕೆಲಸಗಳ ಮೂಲಕ ಬೆಳೆಯಬೇಕು. ಆದರೆ ಪಕ್ವವಾಗಿರುವ ಕ್ರಿಸ್ತೀಯ ಗುಣಗಳು ಫಲದಂತೆಯೂ ಹಾಗೂ ಪುಷ್ಪದಂತೆಯೂ ಇರುತ್ತದೆ. ಅಂದರೆ, ದೇವರ ದೃಷ್ಟಿಯಲ್ಲಿ ಇವುಗಳು ಸುಂದರವಾಗಿಯೂ ಮತ್ತು ಫಲಭರಿತವೂ ಆಗಿದೆ. ಆರಂಭದಿಂದ ಕೊನೆಯವರೆಗೂ ಹೀಗೆಯೇ ಇರುತ್ತದೆ. ಆನಂತರ ಮಹಾಪರಿಶುದ್ಧವನ್ನು ಪ್ರವೇಶಿಸುವ ಜಾಗದಲ್ಲಿ ಅಥವಾ ಪರದೆಯ ಸಮೀಪದಲ್ಲಿ ಇನ್ನೊಂದು ವಸ್ತುವನ್ನು ಕಾಣುತ್ತೇವೆ. ಅದೇನೆಂದರೆ...

ಧೂಪವೇದಿ/ಚಿನ್ನದ ಧೂಪವೇದಿ

ಇದರ ಬಗ್ಗೆ ವಿವರಣೆ ಹೀಗಿದೆ,

**ವಿಮೋಚನಾಕಾಂಡ 40:26,27**

"ಮತ್ತು ಯೆಹೋವನು ಆಜ್ಞಾಪಿಸಿದಂತೆ ಚಿನ್ನದ ಧೂಪವೇದಿಯನ್ನು ದೇವದರ್ಶನದ ಗುಡಾರದಲ್ಲಿ ತೆರೆಯ ಮುಂದೆ ಇಟ್ಟು ಅದರ ಮೇಲೆ ಪರಿಮಳ ದ್ರವ್ಯಗಳ ಧೂಪವನ್ನು ಹಾಕಿದನು."

ಹೌದು! ಈ ಧೂಪವೇದಿಯು ಚಿಕ್ಕದಾಗಿದ್ದು ಮರದಿಂದ ಮಾಡಲಾಗಿ ಬಂಗಾರದಿಂದ ಹೊದಿಸಲಾಗಿತ್ತು. ಇದರ ಮೇಲೆ ಯಾಜಕನು ಪರಿಮಳ ಅಥವಾ ಸುಗಂಧ ವಾಸನೆಯನ್ನು ನೀಡುವ ಪುಡಿ-ಪುಡಿಯಾದ ಧೂಪವನ್ನು ಇದ್ದಿಲಿನ ಮೇಲೆ ಹಾಕುವುದರ ಮೂಲಕ ಉಂಟಾಗುವ ಹೊಗೆಯು ಪರಿಶುದ್ಧವನ್ನು ದಟ್ಟವಾಗಿ ಆವರಿಸಿ ಆಮೇಲೆ ಮಹಾಪರಿಶುದ್ಧವನ್ನು ಕೂಡ ಪ್ರವೇಶಿಸಿ ಆವರಿಸುತ್ತಿತ್ತು.

ಇದರ ಅರ್ಥವೇನು?

ಪರಿಶುದ್ಧದಲ್ಲಿರುವ ಈ ಮೂರನೆಯ ವಸ್ತುವು ದೇವರೊಡನೆ ಒಡಂಬಡಿಕೆ ಮಾಡಿಕೊಂಡು ಆರಿಸಲ್ಪಟ್ಟಿರುವ ಹಾಗೂ ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆಯುವವರ ಸ್ಥಿತಿಯನ್ನು ಸೂಚಿಸುತ್ತದೆ.

ಹೌದು! ಇದು ಕ್ರಿಸ್ತನೊಡನೆ ಒಡಂಬಡಿಕೆ ಮಾಡಿಕೊಂಡಿರುವವರ ದೈವಿಕ ಬಲಿಯನ್ನು ವ್ಯಕ್ತಪಡಿಸುತ್ತದೆ.

ಇದು ಹೇಗೆ ಎಂಬುದನ್ನು ನೋಡೋಣ –

"ಕೈ ಪೂರ್ತಿ" ಧೂಪ ಎನ್ನುವುದು ಒಬ್ಬೊಬ್ಬರಿಗಿರುವ ವಯುಕ್ತಿಕ ಸಾಮರ್ಥ್ಯವನ್ನು ಸೂಚಿಸುತ್ತದೆ. ಈ ಸಾಮರ್ಥ್ಯವು ಕೈಯ ಗಾತ್ರಕ್ಕೆ ತಕ್ಕಂತೆ ಒಬ್ಬೊರಿಂದ ಒಬ್ಬೊರಿಗೆ ವ್ಯತ್ಯಾಸವಾಗಬಹುದು ಎಂಬುದನ್ನು ಸಾಂಕೇತಿಕವಾಗಿ ಸೂಚಿಸಲಾಗಿದೆ.

ಆದರೆ, ಒಬ್ಬೊಬ್ಬ ಸದಸ್ಯರ ಬಲಿಯ ಸಾಮರ್ಥ್ಯವು ತಮಗಿರುವ ಪ್ರತಿಭೆಗೆ ತಕ್ಕಂತೆ ಮಾರ್ಪಡಾಗಿರಬಹುದು.

"ಇದ್ದಿಲು" ಎನ್ನುವುದು ವೈರತ್ವದಿಂದ ಕೂಡಿದ ಪ್ರಪಂಚವನ್ನು ಸೂಚಿಸುವುದಾಗಿದ್ದು, ಇದರ ಜೊತೆಗಿನ ಸಂಪರ್ಕವು ತುಂಬಾ ಕಠಿಣವಾದ ಅನುಭವದಿಂದ ಕೂಡಿರುತ್ತದೆ. ಈ ಸುಡುವ ಅನುಭವವಗಳಲ್ಲಿ ವ್ಯಕ್ತವಾಗುವ ಗುಣಗಳು ಪರಿಮಳಯುಕ್ತವಾದ ಹೊಗೆಯನ್ನು ಉಂಟುಮಾಡುತ್ತದೆ.

**ಎಫೆಸದವರಿಗೆ 5:2**

"ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿಯೂ ಯಜ್ಞವಾಗಿಯೂ ಸಮರ್ಪಿಸಿಕೊಂಡ ಪ್ರಕಾರ ನೀವೂ ಪ್ರೀತಿಯಲ್ಲಿ ನಡೆದುಕೊಳ್ಳಿರಿ."

ಹೀಗೆ ಈ ಸುಗಂಧವಾಸನೆಯು ಗುಣಲಕ್ಷಣವನ್ನು ವ್ಯಕ್ತಪಡಿಸುವುದು ಮಾತ್ರವಲ್ಲದೆ ಪವಿತ್ರಾತ್ಮ ವರದ ಫಲವನ್ನು ತೋರ್ಪಡಿಸುವುದರ ಮೂಲಕ ಪರಿಶುದ್ಧವನ್ನು ಆವರಿಸಿ, ಜೊತೆಯಲ್ಲಿರುವ ಯಾಜಕರ ಹಾಗೂ ಸಹೋದರರ ಮೆಚ್ಚುಗೆಗೆ ಪಾತ್ರವಾಗಿರುತ್ತದೆ. ಇಷ್ಟು ಮಾತ್ರವಲ್ಲದೆ, ಮಹಾಪರಿಶುದ್ಧವನ್ನು ಪ್ರವೇಶಿಸುವುದರ ಮೂಲಕ ದೇವರು ಕೂಡ ಇದನ್ನು ಅಂಗೀಕಾರ ಮಾಡಿಕೊಳ್ಳುತ್ತಾರೆ.

ಈಗ ನಾವು ಪರದೆಯ ಒಳಗೆ ಸಾಗೋಣ...

ಮಹಾಪರಿಶುದ್ಧ

ಇದರ ವಿವರಣೆ ಹೀಗಿದೆ –

**ವಿಮೋಚನಾಕಾಂಡ 26:31–33**

"ಹುರಿನಾರಿನ ಬಟ್ಟೆಯಲ್ಲಿ ನೀಲಿ ಧೂಮ್ರ ರಕ್ತವರ್ಣಗಳುಳ್ಳ ದಾರದಿಂದ ಕೆರೂಬಿಗಳನ್ನು ಚಮತ್ಕಾರವಾಗಿ ಕಸೂತಿಹಾಕಿ ಒಂದು ತೆರೆಯನ್ನು ಮಾಡಿಸಬೇಕು. ಜಾಲೀಮರದಿಂದ.......ಮಹಾಪವಿತ್ರಸ್ಥಾನವೆಂಬದನ್ನೂ ಬೇರೆ ಬೇರೆ ಮಾಡುವದು."

ಹೌದು! ಈ ತೆರೆಯು ದೇವದರ್ಶನ ಗುಡಾರದ ಒಳಗೆ ಇದ್ದ ಎರಡನೆಯ ತೆರೆಯಾಗಿದ್ದು, "ಪರಿಶುದ್ಧ" ಹಾಗೂ "ಮಹಾಪರಿಶುದ್ಧ"ವನ್ನು ಬೇರೆ ಬೇರೆ ಮಾಡುವಂತಿತ್ತು."

ಕೇವಲ ಇದರ ಮೂಲಕ ಮಾತ್ರ ಮಹಾಪರಿಶುದ್ಧವನ್ನು ಪ್ರವೇಶಿಸಲು ಅವಕಾಶವಿದ್ದು, ಮಹಾಯಾಜಕನು ವರ್ಷದ ಒಂದೇ ಒಂದು ದಿನದಲ್ಲಿ, ಅಂದರೆ ಪಾಪನಿವಾರಣೆಯ ದಿನದಲ್ಲಿ ಬಲಿಯ ರಕ್ತವನ್ನು ತೆಗೆದುಕೊಂಡು ಅದನ್ನು ಮಹಾಪರಿಶುದ್ಧದೊಳಗಿರುವ ಕೃಪಾಸ್ತನದ ಮೇಲೆ ಪ್ರೋಕ್ಷಿಸುವನು.

ಈ ತೆರೆಯು ತುಂಬಾ ದಪ್ಪ ಹಾಗೂ ಭಾರವಾಗಿದ್ದು, ಇದನ್ನು ಪರಿಶುದ್ಧದೊಳಗಿರುವ ಯಾಜಕರು ಮಾತ್ರ ನೋಡಲು ಅವಕಾಶವಿತ್ತು.

ಮತ್ತಾಯ 27:51 ಮತ್ತು ಲೂಕ 23:45 ತಿಳಿಸಲಾಗಿರುವ ಈ ತೆರೆಯೋ ಕ್ರಿಸ್ತನ ಮರಣದಂದು ಮೇಲಿನಿಂದ ಕೆಳಗೆ ದೇವಾಲಯದಲ್ಲಿ ಹರಿದುಹೋಯಿತು.

ಒಂದು ವೇಳೆ ಮಹಾಯಾಜಕನು ಇದರ ಒಳಗೆ ಪ್ರವೇಶಿಸುವ ಮೊದಲು ಹೇಳಲಾದ ಎಲ್ಲಾ ಕ್ರಮಗಳನ್ನು ಸರಿಯಾಗಿ ನೇರವೇರಿಸದ ಪಕ್ಷದಲ್ಲಿ ತೆರೆಯನ್ನು ಪ್ರವೇಶಿಸುತ್ತಲೇ ಸಾಯುವನು.

ಇದು ಏನನ್ನು ಸೂಚಿಸುತ್ತದೆ?

ಮೊದಲು ನಾವು ಗಮನಿಸುವುದೇನೆಂದರೆ ದೇವದರ್ಶನ ಗುಡಾರದ ಎಲ್ಲಾ ಮೂರು ತೆರೆಗಳಿಗೂ ಒಂದೇ ರೀತಿಯ ಬಣ್ಣಗಳನ್ನು ಉಪಯೋಗಿಸಲಾಗಿದೆ.

ಹೌದು! ಇವುಗಳು ಕ್ರಿಸ್ತನಲ್ಲಿರುವ ಗುಣಸ್ವಭಾವಗಳನ್ನು ವ್ಯಕ್ತಪಡಿಸುತ್ತವೆ.

ನೀಲಿ – ನೀತಿಗೆ ಸೂಚನೆಯಾಗಿದೆ

ನೀಲಿ ಧೂಮ್ರವರ್ಣ – ರಾಜತ್ವಕ್ಕೆ ಸೂಚನೆಯಾಗಿದೆ

ಕಡುಗೆಂಪು – ಈಡುಬಲಿಯ ರಕ್ತದ ಚಿಹ್ನೆಯಾಗಿದೆ

ಮತ್ತು ಚಮತ್ಕಾರವಾಗಿ ಕಸೂತಿಹಾರೆದ ಕೆಲಸವು ಕ್ರಿಸ್ತನ ಸಿಷ್ಕಪಟತಿನವನ್ನು ವ್ಯಕ್ತಪಡಿಸುತ್ತದೆ.

"ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ"
ಆದರೆ ಯಾರೆ ಕ್ರಿಸ್ತನು ಈ ಮೂರು ತೆರೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ?
ಇದರ ಬಗ್ಗೆ ಯೇಸುವೇ ಈ ಕೆಳಗಿನಂತೆ ಉತ್ತರ ಕೊಡುವುದನ್ನು ನೋಡುತ್ತೇವೆ –

**ಯೋಹಾನ 14:6**

"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ."
ಯೇಸುಕ್ರಿಸ್ತನು ಅಪೋಸ್ತಲನಾದ ತೋಮಸನ ಜೊತೆ ಮಾತಾನಾಡುವಾಗ ಈ ಮೂರು ತೆರೆಗಳ ಬಗ್ಗೆ ಸೂಚನೆಯನ್ನು ಕೊಡುತ್ತಾರೆ.
ಹೌದು! ಕ್ರಿಸ್ತೀಯ ಜೀವನದ ಪ್ರಗತಿಯ ಒಂದೊಂದು ಹಂತದಲ್ಲೂ ಕ್ರಿಸ್ತನು ನಮ್ಮ ಮಾರ್ಗದರ್ಶಕನೂ ಹಾಗೂ ಸಲಹೆಗಾರನೂ ಆಗಿದ್ದು ಮುನ್ನಡೆಸುತ್ತಾರೆ.

– ಮೊದಲನೆಯದಾಗಿ ನಂಬಿಗಸ್ತನಾಗುವುದರಿಂದ (ಬಾಗಿಲು – ಮಾರ್ಗ)
– ಎರಡನೆಯದಾಗಿ ಹಿಂಬಾಲಕನಾಗುವುದರಿಂದ (ಸತ್ಯ – ಪರಿಶುದ್ಧದ ಪರದೆ)
– ಕೊನೆಯದಾಗಿ ಸ್ವರ್ಗಲೋಕಕ್ಕೆ ಹೋಗುವುದರ ಮೂಲಕ ಪಡೆಯುವುದರ ಮೊದಲನೆಯ ಪುನರುತ್ಥಾನದಿಂದ (ಜೀವ – ಮಹಾಪರಿಶುದ್ಧದ ಪರದೆ)

**ಯೋಹಾನ 6:44**

"ನನ್ನನ್ನು ಕಳುಹಿಸಿಕೊಟ್ಟಂಥ ತಂದೆಯು ಎಳೆದ ಹೊರತು ಯಾವನೂ ನನ್ನ ಬಳಿಗೆ ಬರಲಾರನು ಮತ್ತು ನಾನು ಅವನನ್ನು ಕಡೇದಿನದಲ್ಲಿ ಎಬ್ಬಿಸುವೆನು."

**ಮತ್ತಾಯ 28:20**

"ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ."
"ಮಹಾಪರಿಶುದ್ಧ"ಕ್ಕೆ ದಾರಿ ಕೊಡುವ ಈ ಎರಡನೆಯ "ಪರದೆ"ಯು, ಮನುಷ್ಯನ ದೇಹಕ್ಕೆ ಸಂಪೂರ್ಣವಾಗಿ ಸತ್ತು, ಮಹಾಪರಿಶುದ್ಧವಾದ.
ಸ್ವರ್ಗದ ದೇಹವಾದ ಆತ್ಮೀಕ ಸ್ವಭಾವಕ್ಕೆ ಪ್ರವೇಶಿಸುವುದನ್ನು ತೋರ್ಪಡಿಸುತ್ತದೆ –

**1 ಕೊರಿಂಥದವರಿಗೆ 15:50,51,52**

"ಸಹೋದರರೇ, ನಾನು ಹೇಳುವದೇನೆಂದರೆ, ರಕ್ತಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು; ಲಯವಾಗುವ ವಸ್ತು ನಿರ್ಲಯಪದವಿಗೆ ಬಾಧ್ಯವಾಗುವದಿಲ್ಲ. ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ. ನಾವೆಲ್ಲರೂ ನಿದ್ರೆಹೋಗುವದಿಲ್ಲ, ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರೆಪ್ಪೆಬಡಿಯುವಷ್ಟರೊಳಗಾಗಿ ಮಾರ್ಪಡುವೆವು."
ಹೌದು! ಈ ವಿಷಯವು ತುಂಬಾ ಸ್ಪಷ್ಟವಾಗಿದೆ.
ಚಮತ್ಕಾರವಾಗಿ ಕಸೂತಿಹಾಕಿ ಪರದೆಯ ಮೇಲೆ ಮಾಡಿದ "ಎರಡು ಕೆರೂಬಿ"ಗಳ ಪ್ರಾಮುಖ್ಯತೆ ಏನು?
ನಾವು ಈಗಾಗಲೇ ತಿಳಿದಿರುವ ಹಾಗೆ ಯಾಜಕರು "ಪವಿತ್ರ"ದಲ್ಲಿ ಸೇವೆಮಾಡುವಾಗ ಪರದೆಯ ಮೇಲೆ ಇರುವ ಈ "ಕೆರೂಬಿ"ಗಳನ್ನು ಕಾಣುತ್ತಾರೆ.

ದೇವರೊಡನೆ ಒಡಂಬಡಿಕೆ ಮಾಡಿಕೊಂಡಿರುವ ನಂಬಿಗಸ್ತನು ಇಕ್ಕಟ್ಟಾದ ದಾರಿಯಲ್ಲಿ ನಡೆಯುವಾಗ ತನಗೆ ಎದುರಾಗುವ ಶೋಧನೆಗಳಲ್ಲಿ ತನ್ನ ಕಣ್ಣ ಮುಂದೆ ಈ ಎರಡು ಕೆರೂಬಿಗಳನ್ನು ಕಾಣುತ್ತಾನೆ ಎಂಬುದನ್ನು ಇದು ವ್ಯಕ್ತಪಡಿಸುತ್ತದೆ.

ಈ ಎರಡು ಕೆರೂಬಿಗಳು ಏನನ್ನು ಸೂಚಿಸುತ್ತವೆ?

ನಮಗೆ ತಿಳಿದಿರುವ ಹಾಗೆ ಪ್ರಕಟನೆ 4ನೇ ಅಧ್ಯಾಯದಲ್ಲಿ ತಿಳಿಸಿರುವ ನಾಲ್ಕು ಜೀವಿಗಳು ದೇವರ ನಾಲ್ಕು ಗುಣಗಳನ್ನು ಸೂಚಿಸುತ್ತವೆ. ಇದನ್ನೇ ಯೆಹೆಜ್ಕೇಲನ ಗ್ರಂಥದಲ್ಲೂ ಕೂಡ ವ್ಯಕ್ತಪಡಿಸಲಾಗಿದೆ.

ಹಾಗೆಯೇ ಈ ಎರಡು ಕೆರೂಬಿಗಳೂ ದೇವರ ಗುಣಗಳನ್ನು ತೋರ್ಪಡಿಸುತ್ತವೆ. ಇಲ್ಲಿ ಎರಡು ಕೆರೂಬಿಗಳ ಮುಖಾಂತರ, ತಂದೆಯ ಎರಡು ಗುಣಗಳನ್ನು ಕಾಣಬಹುದು.

ಅವುಗಳು ಕ್ರಿಸ್ತೀಯನ ಶೋಧನೆಯ ಕಾಲದಲ್ಲಿ ಅತ್ಯಂತ ಉತ್ತೇಜನವನ್ನು ನೀಡುತ್ತವೆ.

ಈ ಎರಡು ಗುಣಗಳು ಯಾವುವು?

ಮೊದಲನೆಯದು ಪ್ರೀತಿ

ಈ ಗುಣದ ಬಗ್ಗೆ ಕ್ರಿಸ್ತನು ಹೀಗೆ ಹೇಳುತ್ತಾರೆ.

**ಯೋಹಾನ 16:27**

"ನೀನು ನನ್ನ ಮೇಲೆ ಮಮತೆಯಿಟ್ಟು, ನನ್ನನ್ನು ತಂದೆಯ ಬಳಿಯಿಂದ ಹೊರಟುಬಂದವನೆಂದು ನಂಬಿದ್ದರಿಂದ ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ."

ಎರಡನೆಯದು ಪರಾಕ್ರಮ

ಹೌದು! ಕಷ್ಟ–ಶೋಧನೆಗಳು ಈ ಎಲ್ಲಾ ದಿಕ್ಕುಗಳಲ್ಲಿ ಬೆಟ್ಟದಂತೆ ಬೆಳೆದರೂ ಕೂಡ ದೇವರ ಪರಾಕ್ರಮದಲ್ಲಿರುವ ಜ್ಞಾನವು ನಮ್ಮ ಮನಸ್ಸಿಗೆ ಪ್ರೋತ್ಸಾಹವನ್ನು ಕೊಡುತ್ತದೆ.

**ರೋಮಾಪುರದವರಿಗೆ 8:31**

"......ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?"

ಹೌದು! ದೇವರ ಪ್ರೀತಿ ಮತ್ತು ಪರಾಕ್ರಮವು ನೀತಿಯ ಮಾರ್ಗದಲ್ಲಿ ನಡೆಯುವವರಿಗೆ ಪ್ರೋತ್ಸಾಹವನ್ನೂ, ಬಲವನ್ನೂ ತುಂಬುತ್ತದೆ.

ಈಗ ನಾವು ದೇವದರ್ಶನ ಗುಡಾರದಲ್ಲಿ ಅತ್ಯಂತ ಒಳಗಿರುವ ಕೋಣೆಯಾದ "ಮಹಾಪರಿಶುದ್ಧ"ವನ್ನು ಪ್ರವೇಶಿಸೋಣ.

ಇದು ಅತೀ ಪರಿಶುದ್ಧ ಎಂದು ಕರೆಯಲ್ಪಟ್ಟು ವಿಸ್ತೀರ್ಣದಲ್ಲಿ 10 ಮೊಳ ಉದ್ದವೂ ಹಾಗೂ ಎತ್ತರವೂ ಇತ್ತು. ಇದು ಪರಿಪೂರ್ಣ ಚೌಕವಾಗಿತ್ತು.

ಇದರ ಒಳಗೆ ಒಂದು ಒಂದೇ ವಸ್ತುವನ್ನು ಮಾತ್ರ ಇಡಲಾಗಿತ್ತು ಅದಾಗಿದೆ – "ಮಂಜೂಷ ಪೆಟ್ಟಿಗೆ"

**ಹಿಬ್ರಿಯರಿಗೆ 9:3–5/ವಿಮೋಚನಾಕಾಂಡ 37:1–9**

"......ಎರಡನೆಯ ತೆರೆಯ ಆಚೆಯಲ್ಲಿ ಅತಿಪವಿತ್ರಸ್ಥಾನ ಏನಿಸಿಕೊಳ್ಳುವ ಇನ್ನೊಂದು ಭಾಗವಿತ್ತು;.......ಕೆರೂಬಿಗಳು ಕೃಪಾಸನವನ್ನು ಆಚ್ಛಾದಿಸಿಕೊಂಡಿದ್ದವು."

"ಬೇಚಲೇಲಿನು ಜಾಲೀಮರದಿಂದ ಮಂಜೂಷವನ್ನು ಮಾಡಿದನು. ಅದು ಎರಡುವರೆ ಮೊಳ ಉದ್ದವೂ ಒಂದುವರೆ ಮೊಳ ಅಗಲವೂ ಒಂದುವರೆ ಮೊಳ ಎತ್ತರವೂ ಆಗಿತ್ತು. ಚೊಕ್ಕಬಂಗಾರದ ತಗಡುಗಳನ್ನು ಅದರ ಹೊರಗಡೆಯೂ ಒಳಗಡೆಯೂ ಹೊದಿಸಿದನು."

ಈ "ಮಂಜೂಷ"ವು ಆಯಣಕಾರದ ಪೆಟ್ಟಿಗೆಯಾಗಿದ್ದು, ಚೊಕ್ಕಬಂಗಾರದ ತಗಡುಗಳಿಂದ ಹೊದಿಸಲಾಗಿತ್ತು. ಮತ್ತು ಇದೇ ಬಂಗಾರದಿಂದ ಎರಡು ಕೆರೂಬಿಯರ ಎರಡು ಆಕಾರಗಳನ್ನು ಮಾಡಿಸಲಾಗಿತ್ತು.

ಆ ಕೆರೂಬಿಗಳು ಹಾರುವುದಕ್ಕೆ ತಯಾರಾಗಿರುವಂತೆ ಮೇಲಕ್ಕೆ ರೆಕ್ಕೆಗಳನ್ನು ಚಾಚಿರುವಂತೆಯೂ ಕೃಪಾಸನವನ್ನು ತಮ್ಮ ರೆಕ್ಕೆಗಳಿಂದ ಮುಚ್ಚುವಂತೆಯೂ ಇದ್ದವು. ಅವುಗಳ ಮುಖಗಳು ಎದುರುಬದುರಾಗಿ ಕೃಪಾಸನವನ್ನು ನಿಖರವಾಗಿ ದೃಷ್ಟಿಸುತ್ತಿದ್ದವು.

ಇದೇ ಕೃಪಾಸನದ ಮೇಲೆ ಮಹಾಯಾಜಕನು ಪಾಪನಿವಾರಣೆಯ ದಿನದಲ್ಲಿ ಬಲಿಯ ರಕ್ತವನ್ನು ಚಿಮ್ಮಿಸುತ್ತಿದ್ದನು.

ಈ ಮಂಜೂಷದ ಒಳಗಡೆ ಮೂರು ವಸ್ತುಗಳನ್ನು ಇಡಲಾಗಿತ್ತು. (ಹಿಬ್ರಿಯ 9:4)

ಮನ್ನಾ ಇಟ್ಟಿದ್ದ ಚಿನ್ನದ ಪಾತ್ರೆ

**ವಿಮೋಚನಾಕಾಂಡ 16:32 –** "ಮೋಶೆಯು ಜನರಿಗೆ – ಯೆಹೋವನು ಇದರ ವಿಷಯದಲ್ಲಿ ಆಜ್ಞಾಪಿಸಿದ್ದೇನೆಂದರೆ – ನಾನು ಐಗುಪ್ತ ದೇಶದಿಂದ ನಿಮ್ಮನ್ನು ಹೊರಗೆ ಬರಮಾಡಿದಾಗ ಅರಣ್ಯದಲ್ಲಿ ತಿನ್ನುವದಕ್ಕೆ ಕೊಟ್ಟ ಆಹಾರವನ್ನು ನಿಮ್ಮ ಸಂತಾನದವರು ನೋಡುವ ಹಾಗೆ ಅವರಿಗೋಸ್ಕರ ನೀವು ಒಂದು ಗೋಮೆರ್ ತುಂಬಾ ಮನ್ನವನ್ನು ಇಟ್ಟುಕೊಳ್ಳಬೇಕು ಎಂದು ಹೇಳಿದನು."

ಆರೋನನ ಚಿಗುರಿದ ಕೋಲು

**ಅರಣ್ಯಕಾಂಡ 17:8 –** "ಮರುದಿನ ಮೋಶೆ ಗುಡಾರದಲ್ಲಿ ಹೋಗಿ ನೋಡಲಾಗಿ, ಆಹಾ, ಲೇವಿಕುಲಕ್ಕೋಸ್ಕರ ಆರೋನನು ಕೊಟ್ಟಿದ್ದ ಕೋಲು ಚಿಗುರಿ ಮೋಗ್ಗೆ ಬಿಟ್ಟು ಹೂವರಳಿ ಬಾದಾಮಿ ಹಣ್ಣುಗಳನ್ನು ಫಲಿಸಿತ್ತು."

ಒಡಂಬಡಿಕೆ ಬರೆದಿದ್ದ ಕಲ್ಲಿನ ಎರಡು ಹಲಗೆಗಳು

**ಧರ್ಮೋಪದೇಶಕಾಂಡ 31:26 –** "ನೀವು ಈ ಧರ್ಮಶಾಸ್ತ್ರಪುಸ್ತಕವನ್ನು ನಿಮ್ಮ ವಶಕ್ಕೆ ತೆಗೆದುಕೊಂಡು ನಿಮ್ಮ ದೇವರಾದ ಯೆಹೋವನ ಆಜ್ಞಾಶಾಸನಗಳ ಮಂಜೂಷದ ಬಳಿಯಲ್ಲಿ ಇಡಿರಿ....."

ಅಂತಿಮವಾಗಿ, ಕೃಪಾಸನದ ಮೇಲೆ ಕೆರೂಬಿಯರ ನಡುವೆ, "ಅಗಮ್ಯವಾದ ಬೆಳಕು" ಇತ್ತು, ಇದನ್ನು ಹಿಬ್ರಿಯ ಭಾಷೆಯಲ್ಲಿ "ಶಕೀನಾ ಬೆಳಕು" ಎಂದು ಕರೆಯಲ್ಪಡಲಾಗುತ್ತದೆ.

ಕೇವಲ ಈ ಬೆಳಕು ಮಾತ್ರ ಅತೀ ಪರಿಶುದ್ಧದಲ್ಲಿತ್ತು.

ಇವುಗಳಲ್ಲಿವು ಏನನ್ನು ಸೂಚಿಸುತ್ತವೆ?

ಅತೀ ಪರಿಶುದ್ಧದ ಬಗ್ಗೆ ನಾವು ಈಗಾಗಾಲೆ ತಿಳಿದಿರುವ ಹಾಗೆ ಇದು ಪರಲೋಕವನ್ನು ಸೂಚಿಸುವುದಾಗಿದ್ದು, ಕ್ರಿಸ್ತನ ದೇಹವು ಅಂತಿಮವಾಗಿ ಸಭೆಯಾಗಿ ಮಾರ್ಪಾಡಾಗುವುದನ್ನು ವ್ಯಕ್ತಪಡಿಸುತ್ತದೆ. ಆತ್ಮೀಕ ಮನಸ್ಸು (ಪರಿಶುದ್ಧದಲ್ಲಿರುವ ಸ್ಥಿತಿ) ಇರುವುದು ಮಾತ್ರವಲ್ಲದೆ, ಯೇಸು ಮತ್ತು ದೇವರೊಂದಿಗೆ ಮಹಿಮೆಯುಳ್ಳ ಆತ್ಮೀಕ ದೇಹವನ್ನು ಹೊಂದಿರುತ್ತಾರೆ.

"ಮಂಜೂಷ"ವು ಏನನ್ನು ಸೂಚಿಸುತ್ತದೆ?

ದೇವರು ತಮ್ಮ ಎಲ್ಲಾ ಸೃಷ್ಟಿಗಿಂತಲೂ ಮೊದಲು ರೂಪಿಸಿದ ದೈವೀಕ ಸಂಕಲ್ಪವು ತಮ್ಮ ಚಿತ್ತದಂತೆ ಒಂದುಗೂಡುವುದನ್ನು ಈ ಮಂಜೂಷ ಪೆಟ್ಟಿಗೆಯು ಸೂಚಿಸುತ್ತದೆ. ಇದು ಶಾಶ್ವತವಾದ ಯೋಜನೆಯಾಗಿದ್ದು ಕ್ರಿಸ್ತನು ಮತ್ತು ಸಭೆಯ ಮುಖಾಂತರ ಇದನ್ನು ನೆರವೇರಿಸುವ ರಹಸ್ಯವಾದ ವ್ಯವಸ್ಥೆಯಾಗಿದೆ.

ಈಗ ನಾವು ಇದರಲ್ಲಿರುವ ವಿವಿಧ ಭಾಗಗಳ ಬಗ್ಗೆ ಧ್ಯಾನಿಸೋಣ –

"ಕೃಪಾಸನ" – ನಾವು ಈಗಾಗಲೇ ನೋಡಿರುವಂತೆ, ಮಹಾಯಾಜಕನು ಪಾಪನಿವಾರಣೆಯ ದಿನದಂದು ಅತೀ ಪರಿಶುದ್ಧವನ್ನು ಪ್ರವೇಶಿಸಿ ಬಲಿಯ ರಕ್ತವನ್ನು ಕೃಪಾಸನ ಮೇಲೆ ಚಿಮ್ಮಿಸುತ್ತಾನೆ.

ಏಕೆಂದರೆ ಕೃಪಾಸನವು ದೇವರ ಗುಣಲಕ್ಷಣದಲ್ಲಿ ಒಂದಾದ ನ್ಯಾಯದ ಸಂಕೇತವಾಗಿದೆ.

ರಕ್ತವು ಜೀವವನ್ನು (ಯಾಜಕಕಾಂಡ 17:11) ಸೂಚಿಸುವುದರೊಂದಿಗೆ ನ್ಯಾಯವನ್ನು ನೆರವೇರಿಸುತ್ತದೆ.

ಮಂಜೂಷದ ಮೇಲೆ ಎರಡು ಕೆರೂಬಿಯರ ನಡುವೆ ಇರುವ ಸ್ಥಳವು ಯೆಹೋವನ "ಜ್ಞಾನ"ವನ್ನು ಸೂಚಿಸುತ್ತದೆ.

"ಆರೋನನ ಚಿಗುರಿದ ಕೋಲು" –

ಯೇಸುಕ್ರಿಸ್ತನು ದೇವರಿಂದ ರಾಜವಂಶಸ್ಥದ ಯಾಜಕನಾಗಿ ಆರಿಸಿಕೊಂಡದ್ದನ್ನು ಸೂಚಿಸುತ್ತದೆ.

**ಹಿಬ್ರಿಯರಿಗೆ 5:6** "ಆತನ ಇನ್ನೊಂದು ಸ್ಥಳದಲ್ಲಿ – ನೀನು ಸದಾಕಾಲವು ಮೆಲ್ಕಿಜೆದೇಕನ ತರಹದ ಯಾಜಕನು ಎಂದು ಹೇಳುತ್ತಾನೆ."

ಹಾಗೆಯೇ ಕ್ರಿಸ್ತನೊಂದಿಗೆ ಸಭೆಯು ಕೂಡ ರಾಜವಂಶಸ್ಥದ ಯಾಜಕರಾಗಿ ಆರಿಸಿಕೊಳ್ಳುವುದನ್ನು ವಚನದಲ್ಲಿ ಈ ರೀತಿ ಹೆಳಲಾಗಿದೆ.

**1 ಪೇತ್ರ 2:9** – ".......ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಪ್ರಜೆಯೂ ಆಗಿದ್ದೀರಿ."

"ಒಡಂಬಡಿಕೆ ಬರೆದಿದ್ದ ಕಲ್ಲಿನ ಹಲಗೆಗಳು" –

ಯೇಸುಕ್ರಿಸ್ತನು ನ್ಯಾಯಧಿಪತಿಯಾಗಿಯೂ ಹಾಗೂ ನ್ಯಾಯ ವಿಚಾರಣೆ ಮಾಡುವವನಾಗಿಯೂ ದೇವರಿಂದ ನೇಮಕಗೊಂಡದ್ದನ್ನು ಇದು ಸೂಚಿಸುತ್ತದೆ.

**ಅಪೋಸ್ತಲರ ಕೃತ್ಯಗಳು 17:31** – "ಯಾಕೆಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ........ಆಧಾರ ಕೊಟ್ಟಿದ್ದಾನೆ ಅಂದನು."

ಆನಂತರ ಸಭೆಯೂ ಕೂಡ ತೀರ್ಪುಗಾರರಾಗಿ ನೇಮಕಕೊಳ್ಳುವುದನ್ನು ಈ ರೀತಿಯಾಗಿ ಹೇಳಲಾಗಿದೆ.

**1 ಕೊರಿಂಥದವರಿಗೆ 6:2** – "ದೇವಜನರು ಲೋಕಕ್ಕೆ ತೀರ್ಪು ಮಾಡುವರೆಂಬುದು ನಿಮಗೆ ತಿಳಿಯದೋ?......."

"ಮನ್ನಾ ಇಟ್ಟಿದ್ದ ಚಿನ್ನದ ಪಾತ್ರೆ" –

ಇದು ನಾಶವಾಗದ ಮನ್ನಾವಾಗಿದೆ. ಆದರೆ ಇಸ್ರಾಯೇಲ್ಯರು ತಿಂದ ಮನ್ನಾವು ಮರುದಿನಕ್ಕೆ ಇಟ್ಟರೆ ಕೊಳೆತುಹೋಗುತ್ತಿತ್ತು.

ಈ ನಾಶವಾಗದ ಮನ್ನವೂ ಅಮರತ್ವವನ್ನು ಹೊಂದಿರುವಂಥಹ ದೈವೀಕ ಸ್ವಭಾವವನ್ನು ವ್ಯಕ್ತಪಡಿಸುತ್ತದೆ.

ಇದನ್ನು ಮೊದಲು ಯೇಸುಕ್ರಿಸ್ತನು ಹೊಂದಿರುವವರಾಗಿದ್ದಾರೆ.

**ಪ್ರಕಟನೆ 1:18** – "ಸತ್ತನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ."

ಆಮೇಲೆ ಸಭೆಗೂ ಕೂಡ ಈ ದೈವೀಕ ಸ್ವಭವವನ್ನು ನೀಡಲಾಗುವುದು.

**2 ಪೇತ್ರ 1:4 –** ".....ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ."

ಮಂಜೂಷ ಪೆಟ್ಟಿಗೆಯನ್ನು ಮುಚ್ಚಿರುವ ದಪ್ಪದಾದ ಮುಚ್ಚಳವು ಮೊದಲಿಗೆ ದೇವರ ನೀತಿಯನ್ನು ತೋರ್ಪಡಿಸುತ್ತದೆ.

ಪಾಪನಿವಾರನೆಯ ರಕ್ತವು ಇದರ ಮೇಲೆ ಚಿಮ್ಮಿಸಲ್ಪಟ್ಟ ನಂತರ, ಇದು ಕೃಪಾಸನವಾಗಿ ಮಾರ್ಪಟ್ಟು ಜನರೆಡೆಗೆ ದೇವರ ಕರುಣೆಯು ಹರಿದುಹೋಗುವ ಕಾಲುವೆಯಾಗಿ ಬದಲಾಗುತ್ತದೆ.(ಹಿಬ್ರಿಯ 9:5)

ಕೊನೆಯದಾಗಿ ಎರಡು ಕೆರೂಬಿಯರ ಬಗ್ಗೆ ತಿಳಿದುಕೊಳ್ಳೋಣ, ....ಇವುಗಳು ದೇವರ ಇನ್ನುಳಿದ ಎರಡು ಗುಣಗಳನ್ನು ವ್ಯಕ್ತಪಡಿಸುತ್ತವೆ.

ಅವುಗಳೆಂದರೆ, ಪ್ರೀತಿ ಮತ್ತು ಪರಾಕ್ರಮ(ಪ್ರಭಾವ)

ಇವುಗಳು ಕೃಪಾಸನವನ್ನು ನೋಡಿಕೊಂಡು ಹಾರಲು ತಯಾರಾಗಿರುವಂತೆ ಏಕೆ ತೋರಿಸಲಾಗಿದೆ?

ಏಕೆಂದರೆ ಕ್ರಿಸ್ತನ ಮೂಲಕ ಪಾಪನಿವಾರಣೆಯ ಬಲಿಯು ನೆರವೇರದೆ ಇರುವ ತನಕ ದೇವರ ಪ್ರೀತಿ ಮತ್ತು ಪ್ರಭಾವವನ್ನು ಲೋಕಕ್ಕೆ ವ್ಯಕ್ತಪಡಿಸಲಾಗುವುದಿಲ್ಲ.

ಆದರೆ ನೀತಿಯು ಸಂಪೂರ್ಣವಾಗಿ ನೆರವೇರಿದ ನಂತರ ದೇವರ ಪ್ರೀತಿ ಮತ್ತು ಪ್ರಭಾವವು ಅವರ ರಾಜ್ಯದಲ್ಲಿ ಎಲ್ಲರನ್ನೂ ಪುನರುತ್ಥಾನಗೊಳಿಸುವುದರ ಮೂಲಕ ವ್ಯಕ್ತವಾಗುವುದು. ಮತ್ತು ಶ್ರೇಷ್ಠವಾದ ಆಶೀರ್ವಾದಗಳು ಎಲ್ಲವನ್ನೂ ಸರಿಮಾಡುವ ಈ ಕಾಲದಲ್ಲಿ ಸಮಸ್ತ ಜನರಿಗೆ ಹರಿದುಬರುವುವು.

ಅಂತಿಮವಾಗಿ "ಶೆಕೀನಾ ಬೆಳಕು" ದೇವರ ದೈವೀಕ ಪ್ರಸನ್ನತೆಯನ್ನು ಸೂಚಿಸುತ್ತದೆ. ಇದಕ್ಕಾಗಿಯೇ ಇಸ್ರಾಯೇಲ್ಯರು ದೇವರನ್ನು ಹೀಗೆ ಉಲ್ಲೇಖಿಸುತ್ತಾರೆ...

**ಯೆಶಾಯ 37:16**

"ಕೆರೂಬಿಗಳ ಮೇಲೆ ಆಸೀನನಾಗಿರುವಾತನೇ.... ಇಸ್ರಾಯೇಲಾ ದೇವರೇ, ಸೇನಾಧೀಶ್ವರನಾದ ಯೆಹೋವನೇ, ಎಲ್ಲಾ ಭೂರಾಜ್ಯಗಳನ್ನು ಆಳುವ ದೇವರು ನೀನೊಬ್ಬನೇ........"

"ಶೆಕೀನಾ" ಎಂಬ ಪದವು ಸತ್ಯವೇದದಲ್ಲಿ ಗೋಚರವಾಗದಿದ್ದರೂಕೂಡ ಅತೀ ಪವಿತ್ರದಲ್ಲಿ ಮಂಜೂಷದ ಮೇಲೆ ಕೆರೂಬಿಯರ ನಡುವೆ ಇರುವ ಈ ವಿಶೇಷವಾದ ಅಗಮ್ಯವಾದ ಬೆಳಕನ್ನು ಹೀಬ್ರಾ ಪದಕ್ಕೆ ಅನ್ವಯವಾಗಿದೆ. (1 ಯೋಹಾನ 1:5)

ಹೀಗೆ ಇಡೀ ಮಂಜೂಷವು ದೈವೀಕ ಕುಟುಂಬದ "ಐಕ್ಯತೆ"ಯನ್ನು ವ್ಯಕ್ತಪಡಿಸುತ್ತದೆ. ಇದರ ಬಗ್ಗೆ ಯೇಸುಕ್ರಿಸ್ತನು ಹೀಗೆ ಬೋಧಿಸುತ್ತಾರೆ.

**ಯೋಹಾನ 17:21**

".....ಅವರೆಲ್ಲರೂ ಒಂದಾಗಿರಬೇಕಂತಲೂ ತಂದೆಯೇ, ನೀನೂ ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕಂತಲೂ ಕೇಳಿಕೊಳ್ಳುತ್ತೇನೆ."

–ಆಮೆನ್–